**ಮೀನುಗಾರಿಕೆ ಇಲಾಖೆ**

**ವಾರ್ಷಿಕ ವರದಿ 2021–22**

**ಸಾಧನೆಗಳ ಸಂಕ್ಷಿಪ್ತ ವಿವರ**

1.1 ಮೀನುಗಾರಿಕೆಯು ಪೌಷ್ಠಿಕ ಆಹಾರ, ವಿದೇಶಿ ವಿನಿಮಯ ಹಾಗೂ ಉದ್ಯೋಗಾವಕಾಶದ ಸೃಷ್ಠಿಯ ಮೂಲವಾಗಿರುವುದರಿಂದ ರಾಜ್ಯದ ಹಾಗೂ ದೇಶದ ಆರ್ಥಿಕ ಪ್ರಗತಿಯಲ್ಲಿ ಪ್ರಮುಖ ಸ್ಥಾನವನ್ನು ಹೊಂದಿದೆ.

1.2 ಕರ್ನಾಟಕ ರಾಜ್ಯವು 3.02 ಲಕ್ಷ ಹೆಕ್ಟೇರ್ ಜಲ ವಿಸ್ತೀರ್ಣವುಳ್ಳ ಕೆರೆ, ಕೊಳಗಳನ್ನು ಮತ್ತು 2.72 ಲಕ್ಷ ಹೆಕ್ಟೇರ್ ವಿಸ್ತೀರ್ಣವುಳ್ಳ ಜಲಾಶಯಗಳನ್ನೊಳಗೊಂಡು ಒಟ್ಟು 5.74ಲಕ್ಷ ಹೆಕ್ಟೇರಿನಷ್ಟು ವಿಸ್ತೀರ್ಣವುಳ್ಳ ಒಳನಾಡು ಜಲ ಸಂಪನ್ಮೂಲವನ್ನು ಹೊಂದಿದೆ. ಇದರ ಜೊತೆಗೆ 8000 ಹೆಕ್ಟೇರಿನಷ್ಟು ಹಿನ್ನೀರು ಪ್ರದೇಶ, 320 ಕಿ.ಮೀ. ಉದ್ದದ ಕರಾವಳಿ ತೀರ ಪ್ರದೇಶ ಹಾಗೂ 27,000 ಚ. ಕಿ.ಮೀ. ವಿಸ್ತೀರ್ಣದ ವಿಶಾಲವಾದ ಭೂಖಂಡ ಪ್ರದೇಶವನ್ನು ಹೊಂದಿದ್ದು, ಮೀನುಗಾರಿಕೆಯ ಅಭಿವೃದ್ಧಿಗೆ ವಿಪುಲ ಅವಕಾಶ ಹೊಂದಿರುತ್ತದೆ.

1.3 ಕರ್ನಾಟಕ ರಾಜ್ಯವು ಒಟ್ಟು 9.84 ಲಕ್ಷ ಮೀನುಗಾರರನ್ನು ಹಾಗೂ 729 ಮೀನುಗಾರರ ಸಹಕಾರ ಸಂಘಗಳನ್ನು ಒಳಗೊಂಡಿದೆ (132 ಕರಾವಳಿ ಮತ್ತು 597 ಒಳನಾಡು) ಅದರಲ್ಲಿ 667 ಸಕ್ರಿಯ ಸಂಘಗಳು ಕಾರ್ಯನಿರ್ವಹಿಸುತ್ತಿವೆ. (127 ಕರಾವಳಿ ಮತ್ತು 540 ಒಳನಾಡು)

1.4 2021–22ನೇ ಸಾಲಿನಲ್ಲಿ ಕಡಲ ಮೀನು ಉತ್ಪಾದನೆಯು 5.89 ಲಕ್ಷ ಮೆಟ್ರಿಕ್ ಟನ್‌ಗಳಷ್ಟಾಗಿರುತ್ತದೆ. ಕಡಲ ಮೀನುಗಾರಿಕೆಯಲ್ಲಿ 4744 ಯಾಂತ್ರೀಕೃತ ದೋಣಿಗಳು, 10084 ಮೋಟಾರೀಕೃತ ದೋಣಿಗಳು ಮತ್ತು 7714 ಸಾಂಪ್ರದಾಯಿಕ ದೋಣಿಗಳಿವೆ. ಯಾಂತ್ರೀಕೃತ ಮೀನುಗಾರಿಕೆ ದೋಣಿಗಳು ರಾಜ್ಯದ ಒಟ್ಟು ಕಡಲ ಮೀನು ಉತ್ಪಾದನೆಯಲ್ಲಿ ಶೇಕಡ 85ಕ್ಕಿಂತಲೂ ಹೆಚ್ಚಿನ ಪ್ರಮಾಣದ ಮೀನನ್ನು ಹಿಡಿಯುತ್ತಿವೆ.

1.5 2021–22ನೇ ಸಾಲಿನಲ್ಲಿ ರಾಜ್ಯದಿಂದ ರೂ.1962.19 ಕೋಟಿ ಮೌಲ್ಯದ 120427 ಮೆಟ್ರಿಕ್ ಟನ್‌ಗಳಷ್ಟು ಸಾಗರೋತ್ಪನ್ನಗಳನ್ನು ರಫ್ತು ಮಾಡಲಾಗಿದೆ.

1.6 "ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಿಗೆ ಡೀಸೆಲ್– ಮಾರಾಟ ತೆರಿಗೆ ಮರುಪಾವತಿ" ಎಂಬ ಯೋಜನೆಯನ್ನು ಮಾರ್ಪಡಿಸಿ ರಾಜ್ಯ ಮಾರಾಟ ಕರರಹಿತ ಡೀಸೆಲ್ ವಿತರಣೆ ಯೋಜನೆಯನ್ನು ಆಗಸ್ಟ್ 2021ರಿಂದ ಜಾರಿಗೆ ತರಲಾಗಿದ್ದು, 2021–22ನೇ ಸಾಲಿನಲ್ಲಿ ಒಟ್ಟು 1.494 ಲಕ್ಷ ಕಿಲೋ ಲೀಟರ್ ಡೀಸೆಲನ್ನು 3532 ಯಾಂತ್ರೀಕೃತ ಮೀನುಗಾರಿಕಾ ದೋಣಿಗಳಿಗೆ ಅನುಮೋದಿತ ಡೀಸೆಲ್ ಬಂಕ್‌ಗಳಿಂದ ನೇರವಾಗಿ ವಿತರಿಸಲಾಗಿದೆ.

1.7 ಕರಾವಳಿಯಲ್ಲಿ ಪರ್ಮಿಟ್ ಪಡೆದ 4514 ಸಾಂಪ್ರದಾಯಿಕ ಮೀನುಗಾರಿಕೆ ದೋಣಿಗಳಿಗೆ ಮಾಸಿಕ 1355 ಕಿಲೋ ಲೀಟರ್ ಸೀಮೆ ಎಣ್ಣೆಯನ್ನು ಪಡಿತರ ದರದಲ್ಲಿ ನೀಡಲಾಗುತ್ತಿದೆ. 2021–22 ನೇ ಸಾಲಿನಲ್ಲಿ ಒಟ್ಟು 10620 ಕಿಲೋ ಲೀಟರ್ ಸೀಮೆ ಎಣ್ಣೆಯನ್ನು ಪಡಿತರ ದರದಲ್ಲಿ ಸಾಂಪ್ರದಾಯಿಕ ಮೀನುಗಾರಿಕೆ ದೋಣಿಗಳಿಗೆ ನೀಡಲಾಗಿದೆ.

1.8 ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ವಾಣಿಜ್ಯ / ಗ್ರಾಮೀಣ ಪ್ರಾದೇಶಿಕ ಬ್ಯಾಂಕ್‌ಗಳಿಂದ ಮೀನುಗಾರರಿಗೆ ರೂ.50,000 ಗಳವರೆಗೆ ಶೇ.2ರ ಬಡ್ಡಿ ದರದಲ್ಲಿ ಸಾಲವನ್ನು ನೀಡಲಾಗುತ್ತಿದೆ (ಮಹಿಳೆಯರಿಗೆ 0%). 2021–22ನೇ ಸಾಲಿನಲ್ಲಿ 1690 ಪ್ರಕರಣಗಳಲ್ಲಿ ರೂ. 50.00 ಲಕ್ಷಗಳನ್ನು ನೀಡಲಾಗಿದೆ.

1.9 ನೀಲಿಕ್ರಾಂತಿ/ಪಿ.ಎಮ್.ಎಮ್.ಎಸ್.ವೈ.–ಸಮಗ್ರ ಮೀನುಗಾರಿಕೆ ಅಭಿವೃದ್ಧಿ ಮತ್ತು ನಿರ್ವಹಣೆ ಯೋಜನೆಯಡಿ ಕರಾವಳಿ ಮೀನುಗಾರಿಕೆ, ಮೂಲಭೂತ ಸೌಲಭ್ಯ ಮತ್ತು ಹಿಡುವಳಿ ನಂತರದ ಚಟುವಟಿಕೆಗಳ ಅಭಿವೃದ್ಧಿ, ಮೀನುಗಾರರ ಕಲ್ಯಾಣಕ್ಕಾಗಿ ರಾಷ್ಟ್ರೀಯ ಯೋಜನೆ, ಒಳನಾಡು ಮೀನುಗಾರಿಕೆ ಮತ್ತು ಜಲಕೃಷಿ ಅಭಿವೃದ್ಧಿ, ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ ಮತ್ತು ಅದರ ಚಟುವಟಿಕೆಗಳು ಮತ್ತು ಇತರೆ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸಾಮಾನ್ಯ ವರ್ಗದ ಫಲಾನುಭವಿಗಳಿಗೆ 40% ಮತ್ತು ಪ.ಜಾ/ ಪ.ಪಂ/ ಮಹಿಳೆಯರಿಗೆ 60% ಸಹಾಯಧನವನ್ನು ನೀಡಲಾಗುತ್ತದೆ.

2021–22ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.3337.06 ಲಕ್ಷಗಳನ್ನು 1055 ಫಲಾನುಭವಿಗಳಿಗೆ ವಿವಿಧ ಕಾರ್ಯಕ್ರಮಗಳಿಗೆ ವೆಚ್ಚ ಮಾಡಲಾಗಿದೆ.

1.10 ರಾಜ್ಯದ ಒಳನಾಡು ಜಲ ಸಂಪನ್ಮೂಲಗಳಲ್ಲಿ ಪ್ರತಿ ಹೆಕ್ಟೇರ್ ಉಪಯುಕ್ತತಾ ಜಲವಿಸ್ತೀರ್ಣಕ್ಕೆ 2000 ಬಲಿತ ಬಿತ್ತನೆ ಮೀನುಮರಿಗಳನ್ನು ಮೀನುಗಾರರ ಸಹಕಾರ ಸಂಘಗಳ ಮುಖಾಂತರ ಉಚಿತವಾಗಿ ಬಿತ್ತನೆ ಮಾಡಿ ಒಳನಾಡು ಮೀನು ಉತ್ಪಾದನೆಯನ್ನು ಹೆಚ್ಚಿಸಲು "ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ" ಯೋಜನೆಗೆ ಮಂಜೂರಾತಿ ನೀಡಲಾಗಿದೆ. 2021–22 ನೇ ಸಾಲಿನಲ್ಲಿ 282 ಲಕ್ಷ ಮೌಲ್ಯದ ಬಲಿತ ಮೀನುಮರಿಗಳನ್ನು 342 ಕೆರೆಗಳಿಗೆ ದಾಸ್ತಾನು ಮಾಡಲಾಗಿದೆ.

1.11 ಮೀನು ಮರಿಗಳ ಸಾಕಣೆಯನ್ನು ಪ್ರೋತ್ಸಾಹಿಸಲು ಜಲಾಶಯಗಳ/ಕೆರೆಗಳ ಅಂಚಿನಲ್ಲಿ ಮೀನುಮರಿಗಳ ಸಾಕಣೆ ಕೊಳಗಳ ನಿರ್ಮಾಣಕ್ಕೆ ಗರಿಷ್ಠ ರೂ.2.50 ಲಕ್ಷ ಸಹಾಯಧನ ನೀಡುವ ಯೋಜನೆ ರೂಪಿಸಲಾಗಿದೆ. ಈ ಯೋಜನೆಯಡಿ 41.00ಹೆಕ್ಟೇರ್ ಮೀನುಮರಿಗಳ ಸಾಕಣೆಯ ಕೊಳಗಳ ನಿರ್ಮಾಣಕ್ಕೆ ರೂ.102.70ಲಕ್ಷ ಸಹಾಯಧನ ನೀಡಲಾಗಿದೆ.

1.12 ರಾಜ್ಯದ 38 ಜಲಾಶಯಗಳಲ್ಲಿ 220.00 ಲಕ್ಷ ಬಲಿತ ಗೆಂಡೆ ಮೀನುಮರಿಗಳನ್ನು ದಾಸ್ತಾನು ಮಾಡಿ ಅಭಿವೃದ್ಧಿಪಡಿಸಲಾಗಿದೆ.

1.13 ಮೀನುಗಾರಿಕೆ ಸಲಕರಣೆ ಕಿಟ್‌ಗಳನ್ನು 1670 ಮೀನುಗಾರರಿಗೆ ರೂ. 124.94 ಲಕ್ಷ ವೆಚ್ಚದಲ್ಲಿ ವಿತರಿಸಲಾಗಿದ್ದು, ಸದರಿ ಸಲಕರಣೆಗಳನ್ನು ಶೇ.100 ಆರ್ಥಿಕ ನೆರವಿನೊಂದಿಗೆ ನೀಡಲಾಗಿದೆ.

1.14 ಮಂಜುಗಡ್ಡೆ ಸ್ಥಾವರಗಳು ಉಪಯೋಗಿಸಿದ ವಿದ್ಯುಚ್ಛಕ್ತಿಗೆ ಸಹಾಯಧನ ಯೋಜನೆಯಡಿ 186 ಮಂಜುಗಡ್ಡೆ ಸ್ಥಾವರಗಳಿಗೆ ರೂ.298.94 ಲಕ್ಷ ಆರ್ಥಿಕ ನೆರವು ನೀಡಲಾಗಿದೆ.

1.15 ಸಂಕಷ್ಟ ಪರಿಹಾರ ನಿಧಿ ಯೋಜನೆಯಡಿ 87 ಪ್ರಕರಣಗಳಲ್ಲಿ ಮೀನುಗಾರರಿಗೆ ರೂ.340.47 ಲಕ್ಷ ಪರಿಹಾರ ನೀಡಲಾಗಿದೆ.

1.16 ಉಳಿತಾಯ ಮತ್ತು ಪರಿಹಾರ ಯೋಜನೆಯಡಿ ಸುಮಾರು 24004 ಮೀನುಗಾರರರಿಗೆ ರೂ.720.12 ಲಕ್ಷಗಳ ಪರಿಹಾರವನ್ನು ನೀಡಲಾಗಿದೆ.

1.17 ಮೀನುಗಾರರಲ್ಲಿ ಉದ್ಯಮಶೀಲತೆಯನ್ನು ಉತ್ತೇಜಿಸಲು ರೂ.1705.42 ಲಕ್ಷಗಳ ಮಂಜೂರಾತಿಯೊಂದಿಗೆ 2929 ಕಿಸ್ಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ವಿತರಿಸಲಾಗಿದೆ.

1.18 ಮುಖ್ಯಮಂತ್ರಿ ಕೋವಿಡ್ ಪ್ಯಾಕೇಜ್–2ರಡಿಯಲ್ಲಿ ರೂ.654.66 ಲಕ್ಷಗಳ ಪರಿಹಾರ 21,822 ಮೀನುಗಾರರಿಗೆ ನೀಡಲಾಗಿದೆ.

1.19 2020–21ರಲ್ಲಿ ಮಂಜೂರಾದ ಮೀನುಗಾರಿಕಾ ಸಾಲಮನ್ನಾ ಯೋಜನೆಯಡಿ 23,445 ಮೀನುಗಾರರ ಅರ್ಜಿಗಳನ್ನು ಪರಿಶೀಲಿಸಲಾಗಿದ್ದು, ರೂ.4899.92 ಲಕ್ಷಗಳನ್ನು ಅವರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗಿದೆ.

1.20 ಮೀನುಗಾರಿಕೆ ವಲಯದಲ್ಲಿ, 2021–22ರಲ್ಲಿ ರಾಜ್ಯದಾದ್ಯಂತ 53 ಮೀನು ಕೃಷಿಕರ ಉತ್ಪಾದಕ ಸಂಸ್ಥೆಗಳನ್ನು (ಅಮೃತ್ ಎಫ್‌ಪಿಒ) ನೋಂದಾಯಿಸಲಾಗಿದೆ.


1.21 ನಬಾರ್ಡ್ ನೆರವಿನ ಆರ್‌ಐಡಿಎಫ್ ಯೋಜನೆಯಡಿ ಆರ್‌ಐಡಿಎಫ್ ಟ್ರಾಂಚ್ 22, 23 ಮತ್ತು 24ರ ಅಡಿಯಲ್ಲಿ ಅನುಮೋದಿಸಲಾದ 07 ಕಾಮಗಾರಿಗಳಿಗೆ ರೂ.1500.00 ಲಕ್ಷ ವೆಚ್ಚ ಮಾಡಲಾಗಿದೆ.

1.22 ಕೊಡೇರಿಯಲ್ಲಿ ಚಾಲ್ತಿಯಲ್ಲಿರುವ ಬ್ರೇಕ್‌ವಾಟರ್ ನಿರ್ಮಾಣ ಕಾಮಗಾರಿಯನ್ನು 2021–22ರಲ್ಲಿ ಮುಂದುವರೆಸಲಾಗಿದ್ದು ರೂ. 4.00 ಕೋಟಿ ಅನುದಾನ ಸದರಿ ಕಾಮಗಾರಿಗೆ ನೀಡಲಾಗಿದೆ.

1.23 ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ, ಹೈದರಾಬಾದ್ ಎಸ್.ಸಿ/ಎಸ್.ಟಿ ಮೀನುಗಾರರಿಗೆ ವಿಶೇಷ ತರಬೇತಿ ಕಾರ್ಯಕ್ರಮವನ್ನು ಮಂಜೂರು ಮಾಡಿದೆ.

**1.24** ರಾಜ್ಯದ 4000 ಕಿ.ಮೀಗಳ ನದಿ ಭಾಗಗಳಲ್ಲಿ ಮೀನು ಸಂಪನ್ಮೂಲವನ್ನು ಅಭಿವೃದ್ಧಿಪಡಿಸಲು NFDBವತಿಯಿಂದ 32 ಸ್ಥಳಗಳಲ್ಲಿ ರೂ.120.00 ಲಕ್ಷ ವೆಚ್ಚದಲ್ಲಿ ಮೀನಮರಿಗಳನ್ನು ಬಿತ್ತನೆ ಮಾಡುವ ಯೋಜನೆಯನ್ನು ಮಂಜೂರು(river ranching)ಮಾಡಲಾಗಿದೆ.

**1.25** 1.21 **ಮೀನುಗಾರಿಕೆ ಇಲಾಖೆಯ ಆಡಳಿತ ರೂಪರೇಷೆ**




ಮೀನುಗಾರಿಕೆ ಇಲಾಖೆಯು ಮೀನುಗಾರಿಕೆ ಸಚಿವರ ಆಡಳಿತ ವ್ಯಾಪ್ತಿಯಲ್ಲಿದೆ. ಸರ್ಕಾರದ ಹಂತದಲ್ಲಿ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆರವರು ಮುಖ್ಯಸ್ಥರಾಗಿದ್ದಾರೆ. ಮೀನುಗಾರಿಕೆ ಇಲಾಖೆಯ ಆಡಳಿತ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳು ಮೀನುಗಾರಿಕೆ ನಿರ್ದೇಶಕರ ನೇತೃತ್ವದಲ್ಲಿ ನಡೆಯುತ್ತಿವೆ. ಮೀನುಗಾರಿಕೆ ನಿರ್ದೇಶಕರ ಸಹಾಯಕ್ಕಾಗಿ ನಿರ್ದೇಶನಾಲಯದಲ್ಲಿ ಇಬ್ಬರು ಮೀನುಗಾರಿಕೆ ಅಪರ ನಿರ್ದೇಶಕರು, ಓರ್ವ ಮೀನುಗಾರಿಕೆ ಜಂಟಿ ನಿರ್ದೇಶಕರು, ಆರು ಮೀನುಗಾರಿಕೆ ಉಪ ನಿರ್ದೇಶಕರು (ತಾಂತ್ರಿಕ ಮತ್ತು ಆಡಳಿತ) ಹಾಗೂ 10 ಸಹಾಯಕ ನಿರ್ದೇಶಕರುಗಳು ಕಾರ್ಯನಿರ್ವಹಿಸುತ್ತಿದ್ದಾರೆ. 8 ಪ್ರಾಂತೀಯ ಜಂಟಿ ನಿರ್ದೇಶಕರು, 30 ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿಗಳು ಹಾಗೂ 136 ತಾಲ್ಲೂಕು ಮಟ್ಟದ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಇಲಾಖೆಯಲ್ಲಿ ಒಟ್ಟು 1419 ವಿವಿಧ ವೃಂದದ ಹುದ್ದೆಗಳು ಮಂಜೂರಾಗಿದ್ದು, 657 ಅಧಿಕಾರಿ ಮತ್ತು ಸಿಬ್ಬಂದಿ ಹುದ್ದೆಗಳು ಭರ್ತಿಯಾಗಿದ್ದು 762 ಹುದ್ದೆಗಳು ಖಾಲಿ ಇವೆ.

**2. 2021–22 ರ ವಾರ್ಷಿಕ ಯೋಜನೆ:**

2021–22 ನೇ ಸಾಲಿನಲ್ಲಿ ಒಟ್ಟು ರೂ.26,822.31 ಲಕ್ಷಗಳ ಅನುದಾನವನ್ನು ನೀಡಲಾಗಿರುತ್ತದೆ. ಕೆಲವು ಯೋಜನೆಗಳಿಗೆ ಅಗತ್ಯತೆಗೆ ಅನುಗುಣವಾಗಿ ಹೆಚ್ಚುವರಿ ಅನುದಾನ ರೂ.11042.49 ಲಕ್ಷಗಳನ್ನು ನೀಡಲಾಗಿದೆ. ಹೀಗೆ ಮೀನುಗಾರಿಕೆ ಇಲಾಖೆಗೆ 2021–22 ನೇ ಸಾಲಿನಲ್ಲಿ ಒಟ್ಟು ರೂ.37864.80 ಲಕ್ಷಗಳ ಅನುದಾನ ಒದಗಿಸಲಾಗಿರುತ್ತದೆ. ವಿವರಗಳನ್ನು ಕೆಳಗಿನಂತೆ ನೀಡಲಾಗಿದೆ.

**(ರೂ.ಲಕ್ಷಗಳಲ್ಲಿ)**

| **ವಿವರ** | **ಅಂದಾಜು ಆಯವ್ಯಯ** | **ರಾಜ್ಯದ ಪಾಲು** | **ಕೇಂದ್ರದ ಪಾಲು** | **ಒಟ್ಟು** |
|---|---|---|---|---|
| **ರಾಜ್ಯ ವಲಯ ಯೋಜನೆಗಳು** | | | | |
| ಅ) 2405–ಮೀನುಗಾರಿಕೆ | 18364.35 | 17143.81 | 8085.48 | 25229.29 |
| ಆ) 4405–ಮೀನುಗಾರಿಕೆ ಮೇಲಣ ಬಂಡವಾಳ ವೆಚ್ಚ | 4600.00 | 4712.24 | 3500.00 | 8212.24 |
| **ಒಟ್ಟು ರಾಜ್ಯ ವಲಯ** | **22964.35** | **21856.05** | **11585.48** | **33441.53** |
| **ಜಿಲ್ಲಾ ಪಂಚಾಯತ್ ಯೋಜನೆಗಳು** | | | | |
| ಅ) 2405–ಮೀನುಗಾರಿಕೆ | 3857.96 | 4423.27 | – | 4423.27 |
| **ಒಟ್ಟು** | **26822.31** | **25275.94** | **11585.48** | **37864.80** |

ಹೆಚ್ಚುವರಿ ಅನುದಾನ ಪಡೆದ ಯೋಜನೆಗಳ ವಿವರಗಳು ಕೆಳಗಿನಂತೆ ನೀಡಲಾಗಿದೆ.

| **ಕ್ರ.ಸಂ** | **ಯೋಜನೆ** | **ಹೆಚ್ಚುವರಿ ಅನುದಾನ (ರೂ.ಲಕ್ಷ)** |
|---|---|---|
| 1. | ಕೇಂದ್ರ ಪುರಸ್ಕೃತ ಯೋಜನೆ ನೀಲಿ ಕ್ರಾಂತಿ – ಮೀನುಗಾರಿಕೆಯ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ | 4168.24 |
| 2. | ಕೇಂದ್ರ ಪುರಸ್ಕೃತ ಯೋಜನೆ – ರಾಜ್ಯದ ಪಾಲು– ನೀಲಿ ಕ್ರಾಂತಿ – ಮೀನುಗಾರಿಕೆಯ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ–2405–00–101–0–59 | 2148.86 |
| 3. | ಕೇಂದ್ರ ಪುರಸ್ಕೃತ ಯೋಜನೆ – ರಾಜ್ಯದ ಪಾಲು ಮೀನುಗಾರರ ಕಲ್ಯಾಣ ಯೋಜನೆ–2405–00–120–0–08 | 239.24 |
| 4. | ಮೀನುಗಾರಿಕೆ ಬಂದರುಗಳ ನಿರ್ಮಾಣ– ಬಂಡವಾಳ– ರಾಜ್ಯದ ಪಾಲು | 1000.00 |
| 5. | ಡ್ರೆಜ್ಜಿಂಗ್, ನ್ಯಾವಿಗೇಷನ್ ಮತ್ತು ಮೀನುಗಾರಿಕೆ ಬಂದರುಗಳ ಇತರ ಕೆಲಸಗಳು–ರಾಜ್ಯ ಪಾಲು– ಬಂಡವಾಳ | 1.00 |
| 6 | ಮೀನುಗಾರಿಕೆ ಬಂದರುಗಳು ಮತ್ತು ಲ್ಯಾಂಡಿಂಗ್ ಕೇಂದ್ರಗಳ ನವೀಕರಣ– ಬಂಡವಾಳ | 1595.58 |
| 7 | ನಿರ್ದೇಶನ ಮತ್ತು ಆಡಳಿತ | 69.36 |
| 8 | ತುಂಗಾಭದ್ರಾ ಮಂಡಳಿಯ ಮೀನುಗಾರಿಕೆ ವೆಚ್ಚದ ಪಾಲು | 1.00 |
| | ಬ್ಲಾಕ್ ಅನುದಾನ (Blockgrants) | 565.31 |
| | ಒಟ್ಟು | 11042.49 |

**2021–22 ನೇ ಸಾಲಿನ ಆರ್ಥಿಕ ಪ್ರಗತಿಯ ಸಂಕ್ಷಿಪ್ತ ವಿವರಗಳನ್ನು ಈ ಕೆಳಗಿನಂತೆ ನೀಡಲಾಗಿದೆ.**

**ಆರ್ಥಿಕ ಪ್ರಗತಿ:** (ರೂ.ಲಕ್ಷಗಳಲ್ಲಿ)

| ವಿವರ | ಅನುದಾನ | ಬಿಡುಗಡೆ | ವೆಚ್ಚ |
|---|---|---|---|
| **ರಾಜ್ಯ ವಲಯ ಯೋಜನೆಗಳು** | | | |
| ಅ) 2405–ಮೀನುಗಾರಿಕೆ | 25229.29 | 25223.42 | 24759.60 |
| ಆ) 4405–ಮೀನುಗಾರಿಕೆ ಮೇಲಣ ಬಂಡವಾಳ ವೆಚ್ಚ | 8212.24 | 8210.24 | 8210.24 |
| **ಒಟ್ಟು ರಾಜ್ಯ ವಲಯ** | **33441.53** | **33433.66** | **32969.84** |
| **ಜಿಲ್ಲಾ ಪಂಚಾಯತ್ ಯೋಜನೆಗಳು** | | | |
| ಅ) 2405–ಮೀನುಗಾರಿಕೆ | 4423.27 | 4312.88 | 3960.02 |
| **ಒಟ್ಟು** | **37864.80** | **37746.54** | **36929.86** |

**ಭೌತಿಕ ಪ್ರಗತಿ**

| ಮೀನು ಉತ್ಪಾದನೆ | **ಘಟಕ** | **ಗುರಿ** | **ಸಾಧನೆ** |
|---|---|---|---|
| ಒಳನಾಡು | ಲಕ್ಷ ಮೆ.ಟನ್ | 2.00 | 4.84 |
| ಕರಾವಳಿ | ಲಕ್ಷ ಮೆ.ಟನ್ | 4.10 | 5.89 |
| **ಒಟ್ಟು** | ಲಕ್ಷ ಮೆ.ಟನ್ | 6.10 | 10.73 |
| ಮೀನು ಮರಿ ಉತ್ಪಾದನೆ (ಫ್ರೈ) | ಲಕ್ಷಗಳಲ್ಲಿ | 1125.00 | 7669.06 |

## 3. ಸಮುದ್ರ ಮೀನುಗಾರಿಕೆ

### 3.1 ಮೀನುಗಾರಿಕೆ ದೋಣಿಗಳಿಗೆ ಡೀಸೆಲ್–ಮಾರಾಟ ತೆರಿಗೆ ಮರುಪಾವತಿ (2405–00–103–0–23)

ಈ ಯೋಜನೆಯಡಿ 1.50 ಲಕ್ಷ ಕಿಲೋ ಲೀಟರ್ ರಾಜ್ಯ ಮಾರಾಟ ಕರರಹಿತ ಡೀಸೆಲನ್ನು ಕರಾವಳಿ ಜಿಲ್ಲೆಗಳ ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಿಗೆ ನಿಗದಿಪಡಿಸಲಾದ ಡೀಸೆಲ್ ಬಂಕ್‌ಗಳಿಂದ ನೇರವಾಗಿ ವಿತರಿಸಲಾಗುತ್ತಿದೆ. 2021–22ರಲ್ಲಿ ಮಾರ್ಪಡಿಸಲಾದ ಸದರಿ ಯೋಜನೆಯನ್ನು ಆಗಸ್ಟ್'2021ರಿಂದ ಜಾರಿಗೆ ತರಲಾಗಿದೆ. ಈ ಉದ್ದೇಶಕ್ಕಾಗಿ ರೂ.10500.00 ಲಕ್ಷ ಅನುದಾನ ಒದಗಿಸಲಾಗಿದೆ ಹಾಗೂ ರೂ.1366.74 ಲಕ್ಷಗಳನ್ನು ಇತರೆ ಯೋಜನೆಗಳಿಗೆ ಪುನರ್ವಿನಿಯೋಗ ಮಾಡಲಾಗಿದ್ದು ವಿವರ ಈ ಕೆಳಕಾಣಿಸಿದೆ.

| ಕ್ರ.ಸಂ | ಯೋಜನೆ | ಲೆಕ್ಕ ಶೀರ್ಷಿಕೆ | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 01. | ಜಲಾಶಯಗಳಲ್ಲಿ ಮೀನುಗಾರಿಕೆ ಅಭಿವೃದ್ಧಿ | 2405–00–101–0–54–051 ಸಹಾಯ | 100.00 |
| 02. | ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ | 2405–00–101–0–03–106 ಸಹಾಯ | 100.00 |
| 03. | ನಿರ್ದೇಶನ ಮತ್ತು ಆಡಳಿತ | 2405–00–001–0–01–014 ಇತರೆ ವೆಚ್ಚ | 3.22 |
| 04. | ನಿರ್ದೇಶನ ಮತ್ತು ಆಡಳಿತ | 2405–00–001–0–01–034 ಹೊರ ಗುತ್ತಿಗೆ | 49.06 |
| 05. | ನಿರ್ದೇಶನ ಮತ್ತು ಆಡಳಿತ | 2405–00–001–0–01–051 ಸಾಮಾನ್ಯ ವೆಚ್ಚ | 50.00 |
| 06. | ನಿರ್ದೇಶನ ಮತ್ತು ಆಡಳಿತ | 2405–00–001–0–01–051 ಸಾಮಾನ್ಯ ವೆಚ್ಚ | 70.56 |
| 07. | ನಿರ್ದೇಶನ ಮತ್ತು ಆಡಳಿತ | 2405–00–001–0–01–0052 ದೂರವಾಣಿ ವೆಚ್ಚ | 3.18 |
| 08. | ನಿರ್ದೇಶನ ಮತ್ತು ಆಡಳಿತ | 2405–00–001–0–01–059 ಇತರೆ ವೆಚ್ಚ | 37.16 |

| | | | |
|---|---|---|---|
| 09. | ನಿರ್ದೇಶನ ಮತ್ತು ಆಡಳಿತ | 2405-00-001-0-01-071 ಕಟ್ಟಡ ವೆಚ್ಚ | 22.91 |
| 10. | ನಿರ್ದೇಶನ ಮತ್ತು ಆಡಳಿತ | 2405-00-001-0-01-014 ಸಾರಿಗೆ | 25.56 |
| 11. | ನಿರ್ದೇಶನ ಮತ್ತು ಆಡಳಿತ | 2405-00-001-0-01-200 ನಿರ್ವಹಣೆ | 153.00 |
| 12. | ಮಂಜುಗಡ್ಡೆ ಸ್ಥಾವರಗಳು ಬಳಸುವ ವಿದ್ಯುತ್ ಮೇಲೆ ಸಹಾಯಧನ | 2405-00-110-0-03-106 ಸಹಾಯ | 116.00 |
| 13. | ಸಂಕಷ್ಟ ಪರಿಹಾರ ನಿಧಿ | 2405-00-103-0-15 | 76.09 |
| 14. | ಕರಾವಳಿ ಮೀನುಗಾರರಿಗೆ ಸಿ.ಎಸ್.ಎಸ್.-ಉಳಿತಾಯ ಮತ್ತು ಪರಿಹಾರ ಯೋಜನೆ | 2405-00-120-0-07-100 | 562.00 |
| | **ಒಟ್ಟು** | | **1368.74** |

2021-22ನೇ ಸಾಲಿನ ಆರ್ಥಿಕ ವರ್ಷದಲ್ಲಿ ರೂ.9131.66ಲಕ್ಷ ಬಿಡುಗಡೆಯಾಗಿದ್ದು, ರೂ.8811.83 ಲಕ್ಷ ವೆಚ್ಚ ಮಾಡಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

| **ಜಿಲ್ಲೆ** | **ದೋಣಿಗಳ ಸಂಖ್ಯೆ** | **ವಿತರಿಸಿದ ಡೀಸೆಲ್ ಪ್ರಮಾಣ (ಲಕ್ಷ ಲೀ.ಗಳಲ್ಲಿ)** | **ಸಹಾಯ ಧನ (ರೂ.ಲಕ್ಷಗಳಲ್ಲಿ)** |
|---|---|---|---|
| ಉಡುಪಿ | 1799 | 349.92 | 5104.92 |
| ಉತ್ತರ ಕನ್ನಡ | 688 | 32.00 | 479.76 |
| ದಕ್ಷಿಣ ಕನ್ನಡ | 1115 | 206.78 | 2920.64 |
| ಸಾಂಪ್ರದಾಯಿಕ ದೋಣಿಗಳಿಗೆ ಕೋವಿಡ್ ಪರಿಹಾರ ಪ್ಯಾಕೇಜ್ | | | 151.71 |
| FRP ದೋಣಿಗಳು, ಬಲೆಗಳು, ಐಸ್ ಬಾಕ್ಸ್‌ಗಳ ವಿತರಣೆ(SCP) | | | 154.80 |
| **ಒಟ್ಟು** | **3602** | **589.70** | **8811.83** |

### 3.2 ಸಾಂಪ್ರದಾಯಿಕ ದೋಣಿಗಳಿಗೆ ಸೀಮೆ ಎಣ್ಣೆ ಸರಬರಾಜು: (2405-00-103-0-17)

ಕರ್ನಾಟಕದ ಕರಾವಳಿಯಲ್ಲಿ ಹೆಚ್ಚಿನ ಸಂಖ್ಯೆಯ ಸಾಂಪ್ರದಾಯಿಕ ದೋಣಿಗಳು ಮೀನುಗಾರಿಕೆಯಲ್ಲಿ ತೊಡಗಿದ್ದು, ಈ ನಾಡ ದೋಣಿಗಳು ಔಟ್‌ಬೋರ್ಡ್ ಇಂಜಿನ್‌ಗಳನ್ನು ಅಳವಡಿಸಿಕೊಂಡು ಸಮುದ್ರ ತೀರದಿಂದ ಕಡಿಮೆ ಅವಧಿಯಲ್ಲಿ ಮೀನು ಹಿಡಿಯುವ ಸ್ಥಳಕ್ಕೆ ಹೋಗಿ ಮೀನುಗಾರಿಕೆ ಮಾಡಿ ಮೀನು ಇಳಿದಾಣ ಕೇಂದ್ರಕ್ಕೆ ಹಿಂದಿರುಗಲು ಅನುಕೂಲವಾಗಿದೆ. ಈ ಮೋಟಾರೀಕೃತ ದೋಣಿಗಳಿಗೆ ಬಹು ವರ್ಷಗಳಿಂದ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆವತಿಯಿಂದ ಪಡಿತರ ದರದಲ್ಲಿ ಮಾಹೆಯಾನ ತಲಾ 300 ಲೀಟರ್ ಸೀಮೆ ಎಣ್ಣೆಯನ್ನು ಪ್ರತಿ ದೋಣಿಗೆ ಪೂರೈಸಲಾಗುತ್ತಿತ್ತು. ಆದರೆ 2018-19 ನೇ ಸಾಲಿನಿಂದ ಮೀನುಗಾರಿಕೆ ಇಲಾಖೆಯಡಿ ಈ ಯೋಜನೆಗೆ ಅನುದಾನ ಒದಗಿಸಲಾಗುತ್ತಿದೆ. ಈ ಸಾಂಪ್ರದಾಯಿಕ ದೋಣಿಗಳಿಗೆ ಪಡಿತರ ದರದಲ್ಲಿ ಪ್ರತಿ ಮಾಹೆ 300 ಲೀಟರ್ ಸೀಮೆ ಏಣ್ಣೆಯನ್ನು ಪ್ರತಿ ಬೋಟಿಗೆ ಸರಬರಾಜು ಮಾಡಲು ಅವಕಾಶ ಕಲ್ಪಿಸಲಾಗಿದೆ. ಈ ಯೋಜನೆಗೆ ರೂ.2.00 ಲಕ್ಷ ಮೀಸಲಿಡಲಾಗಿತ್ತು, ಆದರೆ ಈ ಯೋಜನೆಯಡಿ ಹಣ ಬಿಡುಗಡೆಯಾಗಿಲ್ಲ. ಆದಾಗ್ಯೂ, ಸಬ್ಸಿಡಿ ದರವು ಸೀಮೆಎಣ್ಣೆಯ ಸಬ್ಸಿಡಿ ರಹಿತ ದರಕ್ಕಿಂತ ಹೆಚ್ಚಿರುವ ಕಾರಣ ಅಂದಾಜು ರೂ. 30.00ಕೋಟಿ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯಲ್ಲಿ ಲಭ್ಯವಿದ್ದು, 2021-22ರ ಅವಧಿಯಲ್ಲಿ ಮೀನುಗಾರರಿಗೆ ಸಬ್ಸಿಡಿ ಸೀಮೆಎಣ್ಣೆ ನೀಡಲು ಈ ಮೊತ್ತವನ್ನು ಬಳಸಿಕೊಳ್ಳಲಾಗುತ್ತಿದೆ. ಕರಾವಳಿಯಲ್ಲಿ ಪರವಾನಿಗೆ ಹೊಂದಿರುವ 4514 ಸಾಂಪ್ರದಾಯಿಕ ಮೀನುಗಾರಿಕಾ ದೋಣಿಗಳಿಗೆ 10508 ಕೆಎಲ್ ಸೀಮೆಎಣ್ಣೆಯನ್ನು ಪಿಡಿಎಸ್ ದರದಲ್ಲಿ ಒದಗಿಸಲಾಗಿದೆ.

| **ಜಿಲ್ಲೆ** | **ದೋಣಿಗಳ ಸಂಖ್ಯೆ** | **ವಿತರಿಸಿದ ಸೀಮೆಎಣ್ಣೆ ಪ್ರಮಾಣ (ಲಕ್ಷ ಲೀ.ಗಳಲ್ಲಿ)** | **ಸಹಾಯಧನ (ರೂ.ಲಕ್ಷಗಳಲ್ಲಿ)** |
|---|---|---|---|
| ದಕ್ಷಿಣ ಕನ್ನಡ | 914 | 2145 | 285.95 |
| ಉಡುಪಿ | 2610 | 6071 | 853.82 |
| ಉತ್ತರ ಕನ್ನಡ | 990 | 2292 | 342.20 |
| **ಒಟ್ಟು** | **4514** | **10508** | **1481.97** |

### 3.3 ಮೀನುಗಾರಿಕೆ ಬಂದರುಗಳು – ಕೇಂದ್ರ ಪುರಸ್ಕೃತ ಯೋಜನೆ (4405–00–103–6–01):

2019–20ನೇ ಸಾಲಿನಲ್ಲಿ ಅಳ್ವೆಕೋಡಿ–ತೆಂಗಿನಗುಂಡಿ ಇಳಿದಾಣ ಕೇಂದ್ರದ ಅಲೆತಡೆಗೋಡೆ ನಿರ್ಮಾಣವನ್ನು ರೂ.86.08 ಕೋಟಿ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ರಾಜ್ಯ ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ಮುಂದುವರೆದು, ಸದರಿ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರವು 50:50 ಅನುಪಾತದಲ್ಲಿ ನೆರವು ನೀಡಲು ಕೇಂದ್ರ ಸರ್ಕಾರದ ಯೋಜನಾ ಮಂಜೂರಾತಿ ಸಮಿತಿಯಲ್ಲಿ ಸಹಮತಿ ನೀಡಲಾಗಿದೆ. ಕೇಂದ್ರ ಸರ್ಕಾರವು ರೂ.17.94 ಕೋಟಿ ಹಾಗೂ ರಾಜ್ಯ ಸರ್ಕಾರವು ರೂ.17.94 ಕೋಟಿಗಳನ್ನು ಬಿಡುಗಡೆಗೊಳಿಸಿವೆ. 2021–22ನೇ ಸಾಲಿನಲ್ಲಿ ಸದರಿ ಕಾಮಗಾರಿಗೆ ಒಟ್ಟು ರೂ.24.96 ಕೋಟಿ ವೆಚ್ಚ ಮಾಡಲಾಗಿದೆ. ಇದಲ್ಲದೆ, ಕೇಂದ್ರ ಸರ್ಕಾರವು ರೂ.10.00 ಕೋಟಿ ಹಾಗೂ ರಾಜ್ಯ ಸರ್ಕಾರವು ರೂ.10.1566 ಕೋಟಿಗಳನ್ನು ಬಿಡುಗಡೆ ಮಾಡಿದೆ. ಒಟ್ಟು ರೂ. 35.30 ಕೋಟಿ ಸದರಿ ಯೋಜನೆಗೆ ವೆಚ್ಚ ಮಾಡಲಾಗಿದೆ.

2021–22ನೇ ಸಾಲಿನಲ್ಲಿ ರೂ.2500.00 ಲಕ್ಷಗಳ ಹಂಚಿಕೆ ಮಾಡಲಾಗಿದೆ. ಹೆಚ್ಚುವರಿ ಹಂಚಿಕೆಯಾದ ನಂತರ ರೂ.4515.66 ಲಕ್ಷ ಬಿಡುಗಡೆಯಾಗಿದ್ದು, ರೂ.4514.66 ಲಕ್ಷಗಳನ್ನು ಈ ಕೆಳಕಂಡ ಕಾಮಗಾರಿಗಳಿಗೆ ಬಳಸಿಕೊಳ್ಳಲಾಗಿದೆ.

| ಕ್ರಸಂ | ಕಾಮಗಾರಿಗಳ ವಿವರ | ಮಂಜೂರಾದ ಮೊತ್ತ | 2021–22ನೇ ಸಾಲಿನ ವೆಚ್ಚ | ಸಂಚಿತ ವೆಚ್ಚ |
|---|---|---|---|---|
| 1. | ಅಳ್ವೇಕೋಡಿ–ತೆಂಗಿನಗುಂಡಿ ಬ್ರೇಕ್ ವಾಟರ್ ನಿರ್ಮಾಣ (50:50::ಕೇ:ರಾ) | 8608.00 | 3995.00 | 5068.34 |
| 2. | ಮಂಗಳೂರು ಮೀನುಗಾರಿಕಾ ಬಂದರಿನ 3ನೇ ಹಂತದ ಕಾಮಗಾರಿ (ಬಾಕಿ ಕಾಮಗಾರಿ) | 2200.00 | 4.00 | 4.00 |
| 3. | SNA ಖಾತೆ | | 515.66 | |
| | **ಒಟ್ಟು** | **10808.00** | **4514.66** | **5072.34** |

### 3.4 ಮೀನುಗಾರಿಕೆ ಇಳಿದಾಣ ಮತ್ತು ತಂಗುದಾಣಗಳು (4405–00–104–0–02):

- 2014–15ನೇ ಸಾಲಿನಲ್ಲಿ ಮಂಜೂರಾದ ಕೊಡೇರಿಯಲ್ಲಿ ಬ್ರೇಕ್ ವಾಟರ್ ನಿರ್ಮಾಣ ಕಾಮಗಾರಿಯನ್ನು ರೂ.3300.00 ಲಕ್ಷಗಳ ವೆಚ್ಚದಲ್ಲಿ ಮುಂದುವರೆಸಲಾಯಿತು. 2021–22ರಲ್ಲಿ ರೂ. 400.00 ಲಕ್ಷಗಳನ್ನು ಮೇಲ್ಕಂಡ ಕಾಮಗಾರಿಗೆ ಬಳಸಿಕೊಳ್ಳಲಾಗಿದ್ದು ಒಟ್ಟು ರೂ. 2470.45 ಲಕ್ಷಗಳನ್ನು ಸದರಿ ಕಾಮಗಾರಿಗೆ ವೆಚ್ಚ ಮಾಡಲಾಗಿದೆ
- ಇವುಗಳಲ್ಲದೆ ರಾಜ್ಯದ ವಿವಿಧ ಬಂದರುಗಳು ಮತ್ತು ಮೀನು ಇಳಿದಾಣ ಕೇಂದ್ರಗಳಲ್ಲಿ ಸಣ್ಣ ಅಧ್ಯಯನಗಳು ಮತ್ತು ಕಾಮಗಾರಿಗಳನ್ನು ರೂ. 85.00 ಲಕ್ಷಗಳ ವೆಚ್ಚದಲ್ಲಿ ಕೈಗೊಳ್ಳಲಾಗಿದೆ.

ಈ ಯೋಜನೆಯಡಿ ರೂ.100.00 ಲಕ್ಷಗಳನ್ನು ಒದಗಿಸಲಾಗಿದ್ದು, ತದನಂತರ ಹೆಚ್ಚುವರಿ ಅನುದಾನ ರೂ. 1595.58 ಲಕ್ಷಗಳನ್ನು ಒದಗಿಸಲಾಗಿದೆ ಮತ್ತು ನಬಾರ್ಡ್ ನೆರವಿನೊಂದಿಗೆ (RIDF) ಮೀನುಗಾರಿಕೆ ಸಂಪರ್ಕ, ಸೇತುವೆಗಳು ಮತ್ತು ಜೆಟ್ಟಿಗಳ ನಿರ್ಮಾಣ ಕಾರ್ಯಕ್ರಮಗಳಿಗೆ ರೂ.500.00ಲಕ್ಷಗಳನ್ನು ಪುನರ್ ವಿನಿಯೋಗ ಮಾಡಲಾಗಿದ್ದು ಈ ಕೆಳಕಂಡ ಕಾಮಗಾರಿಗಳಿಗೆ ಒಟ್ಟು ರೂ.2195.58 ಲಕ್ಷಗಳನ್ನು ಬಳಸಿಕೊಳ್ಳಲಾಗಿದೆ.

| ಕ್ರಸಂ | ವಿವರ | ಮೊತ್ತ | 2021–22 | ವೆಚ್ಚ |
|---|---|---|---|---|
| 1. | ಕೊಡೇರಿಯಲ್ಲಿ ಬ್ರೇಕ್ ವಾಟರ್ ನಿರ್ಮಾಣ (2ನೇ ಹಂತ) | 3300.00 | 1321.48 | 2470.45 |
| 2. | ಗಂಗೊಳ್ಳಿ ಮೀನುಗಾರಿಕಾ ಬಂದರಿನ ಪುನರ್ನಿರ್ಮಾಣ (ಡಯಾಫ್ರಾಮ್ ಗೋಡೆ) | 1200.00 | 500.00 | 870.63 |
| 3. | ಕೊಡೇರಿ ಮೀನುಗಾರಿಕಾ ಬಂದರಿನಲ್ಲಿ ನ್ಯಾವಿಗೇಷನ್ ಚಾನೆಲ್ ಉದ್ಯಕ್ಕೂ ನದಿ ದಡದ ರಕ್ಷಣೆ ಕಾರ್ಯವನ್ನು ಒದಗಿಸುವುದು | 280.00 | 2.00 | 191.77 |
| 4. | ರಾಜ್ಯದ ಮೀನುಗಾರಿಕಾ ಬಂದರುಗಳಲ್ಲಿ ವಿವಿಧ ಕಾಮಗಾರಿಗಳು- ಉಡುಪಿ ವಿಭಾಗದಡಿಯಲ್ಲಿ | 305.50 | 25.86 | 30.01 |
| 5. | ರಾಜ್ಯದ ಮೀನುಗಾರಿಕಾ ಬಂದರುಗಳಲ್ಲಿ ವಿವಿಧ ಕಾಮಗಾರಿಗಳು- ಕಾರವಾರ ವಿಭಾಗದಡಿಯಲ್ಲಿ | 59.48 | 72.14 | 94.11 |
| 6. | ಮಂಗಳೂರು ಮತ್ತು ಮಲ್ಪೆ ಮೀನುಗಾರಿಕೆ ಬಂದರಿನ ಬಾಕಿ ಪಾವತಿಗೆ ಪಾವತಿ | 0 | **274.10** | **274.10** |
| | **ಒಟ್ಟು** | **5144.98** | **2195.58** | **3931.07** |

## 3.5 ನಬಾರ್ಡ್ ನೆರವಿನ ಗ್ರಾಮೀಣ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ನಿಧಿ ಯೋಜನೆ (4405-00-800-2-03):

ಈ ಯೋಜನೆಯಡಿ ರೂ.2000.00 ಲಕ್ಷ ಬಜೆಟ್‌ನಲ್ಲಿ ಮೀಸಲಿಡಲಾಗಿದ್ದು, ರೂ.1500.00 ಲಕ್ಷ ಬಿಡುಗಡೆ ಮಾಡಲಾಗಿದೆ. ರೂ.500.00ಲಕ್ಷಗಳನ್ನು ಲ್ಯಾಂಡಿಗ್ ಮತ್ತು ಬರ್ತಿಂಗ್ ಸೌಲಭ್ಯಗಳಿಗೆ ಪುನರ್ವಿನಿಯೋಗ ಮಾಡಲಾಗಿದೆ. ನಬಾರ್ಡ್ ನೆರವಿನ ಆರ್‌ಐಡಿಎಫ್ ಯೋಜನೆಯಡಿ ಆರ್‌ಐಡಿಎಫ್ ಟ್ರಾಂಚ್ 22, 23 ಮತ್ತು 24ರಡಿಯಲ್ಲಿ ಅನುಮೋದಿಸಲಾದ 7 ಕಾಮಗಾರಿಗಳಿಗೆ ರೂ.1500.00 ಲಕ್ಷ ವೆಚ್ಚ ಮಾಡಲಾಗಿದ್ದು ಕಾಮಗಾರಿಗಳ ವಿವರಗಳನ್ನು ಈ ಕೆಳಕಾಣಿಸಿದೆ.

| ಟ್ರಾಂಚ್ | ಮುಂದುವರಿದ ಕಾಮಗಾರಿಗಳು | ಯೋಜನಾ ವೆಚ್ಚ | ಬಳಕೆ (ರೂ.ಲಕ್ಷಗಳಲ್ಲಿ) |
|---|---|---|---|
| 22 | ಭಟ್ಕಳ ತಾಲೂಕಿನ ಬೆಳಕೆ ಬಳಿ ಕಿರು ಮೀನುಗಾರಿಕಾ ಜೆಟ್ಟಿ ನಿರ್ಮಾಣ | 240.00 | 150.00 |
| 23 | ಉದ್ಯಾವರ ನದಿಯಲ್ಲಿ ಪಡುಕೆರೆ ಭಾಗದಲ್ಲಿ ದೋಣಿಗಳನ್ನು ನಿಲ್ಲಿಸಲು ಮೀನುಗಾರಿಕಾ ಜೆಟ್ಟಿ ನಿರ್ಮಾಣ | 960.00 | 758.00 |
| 23 | ಕೋಡಿ ಕನ್ಯಾಣದಲ್ಲಿ ಫಿಂಗರ್ ಜೆಟ್ಟಿ ನಿರ್ಮಾಣ | 200.00 | 125.00 |
| 24 | ಉಡುಪಿ ತಾಲೂಕಿನ ಬೊಬ್ಬರ್ಯ ಪಾದೆ ಬಳಿ ಜೆಟ್ಟಿ ವಿಸ್ತರಣೆ | 130.00 | 97.00 |
| 24 | ಕೊಪ್ಪಳ ತಾಲೂಕು ಮತ್ತು ಜಿಲ್ಲೆಯ ಶಿವಾಪುರ ಮೀನು ಸಾಕಾಣಿಕೆ ಕೇಂದ್ರಕ್ಕೆ ಮೀನಿನ ಕೆರೆಗಳಿಗೆ ಆರ್‌ಸಿಸಿ ಲೈನಿಂಗ್ ನಿರ್ಮಾಣ, ಫೆನ್ಸಿಂಗ್, ಮುಖ್ಯ ನೀರು ಸರಬರಾಜು ಮತ್ತು ಹಟ್ಟಿ ನಿರ್ಮಾಣ, ರಸ್ತೆ ಮತ್ತು ಚರಂಡಿ ಕಾಮಗಾರಿ. | 340.00 | 60.00 |
| 24 | ಮಂಗಳೂರು ತಾಲೂಕಿನ ತೋಟ ಬೆಂಗ್ರೆಯಲ್ಲಿ ಸಾಂಪ್ರದಾಯಿಕ ಮೀನುಗಾರಿಕಾ ದೋಣಿಗಳನ್ನು ಇಳಿಸಲು ನಾಡದೋಣಿ ತಂಗುದಾಣ ನಿರ್ಮಾಣ | 337.00 | 290.00 |
| 24 | ಉಡುಪಿ ತಾಲೂಕಿನ ಹಂಗಾರಕಟ್ಟೆಯಲ್ಲಿ ಹರಾಜು ಪ್ರಾಂಗಣ ನಿರ್ಮಾಣ | 101.00 | 20.00 |
| | **ಒಟ್ಟು** | **2308.00** | **1500.00** |

## 3.6 ಮೀನುಗಾರಿಕೆ ಬಂದರುಗಳಲ್ಲಿ ಹೂಳೆತ್ತುವಿಕೆ-ಕೇಂದ್ರ ಪುರಸ್ಕೃತ ಯೋಜನೆ(4405-00-103-1-02):

ರಾಜ್ಯದ ಮೀನುಗಾರಿಕಾ ಬಂದರುಗಳಲ್ಲಿ ಮತ್ತು ಮೀನು ಇಳಿದಾಣ ಕೇಂದ್ರಗಳಲ್ಲಿ ಹೂಳು ತುಂಬಿರುವ ಸಮಸ್ಯೆಯನ್ನು ಪರಿಹರಿಸುವ ಸಲುವಾಗಿ ಕೇಂದ್ರ ಪುರಸ್ಕೃತ ಯೋಜನೆ ಮತ್ತು ಬಂದರುಗಳಲ್ಲಿ ಹೂಳೆತ್ತುವ ಇತರ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.

2021-22 ನೇ ಸಾಲಿನಲ್ಲಿ ಯಾವುದೇ ಹಂಚಿಕೆ ಮಾಡಲಾಗಿಲ್ಲ.

## 3.7 ಮಂಜುಗಡ್ಡೆ ಘಟಕಗಳು ಉಪಯೋಗಿಸಿದ ವಿದ್ಯುತ್‌ಚಕ್ತಿಗೆ ಸಹಾಯಧನ (2405-00-110-0-03)

ಈ ಯೋಜನೆಯಡಿ ಮಂಜುಗಡ್ಡೆ ಸ್ಥಾವರಗಳು ಉಪಯೋಗಿಸಿದ ಪ್ರತೀ ಯೂನಿಟ್‌ವಿದ್ಯುತ್‌ಗೆ ರೂ.1.75 ರಂತೆ ಪ್ರತಿ ಘಟಕಕ್ಕೆ ಗರಿಷ್ಠ ರೂ.3.50 ಲಕ್ಷ ಸಹಾಯಧನ ನೀಡಲು ಅವಕಾಶವಿರುತ್ತದೆ.

2021-22 ನೇ ಸಾಲಿನಲ್ಲಿ ರೂ.400.00 ಲಕ್ಷ ಅನುದಾನ ಒದಗಿಸಲಾಗಿದ್ದು, ಮೀನುಗಾರಿಕೆ ದೋಣಿಗಳಿಗೆ ಡೀಸೆಲ್-ಮಾರಾಟ ತೆರಿಗೆ ಮರುಪಾವತಿ ಯೋಜನೆಯಿಂದ ರೂ.116.00 ಲಕ್ಷಗಳನ್ನು ಪುನರ್ವಿನಿಯೋಗ ಮಾಡಿ ರೂ.516.00ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ರಾಜ್ಯದ 180 ಐಸ್ ಪ್ಲಾಂಟ್‌ಗಳಿಗೆ ಸಹಾಯಧನ ವಿತರಿಸಲು ರೂ.515.31 ಲಕ್ಷಗಳನ್ನು ವಿತರಿಸಲಾಗಿದೆ.

| ಜಿಲ್ಲೆ | ಮಂಜುಗಡ್ಡೆ ಸ್ಥಾವರಗಳ ಸಂಖ್ಯೆ | ಸಹಾಯಧನ (ರೂ.ಲಕ್ಷಗಳಲ್ಲಿ) |
|---|---|---|
| ದಕ್ಷಿಣ ಕನ್ನಡ | 52 | 177.76 |
| ಉಡುಪಿ | 90 | 263.42 |
| ಉತ್ತರ ಕನ್ನಡ | 38 | 74.13 |
| **ಒಟ್ಟು** | **180** | **515.31** |

## 3.8 ಕರಾವಳಿ ಕೊಂಡಿ ರಸ್ತೆಗಳ ನಿರ್ವಹಣೆ (2405-00-337-0-01)

ರಾಜ್ಯದ ಮೂರು ಕರಾವಳಿ ಜಿಲ್ಲೆಗಳಲ್ಲಿ ಒಟ್ಟು 355.13 ಕಿಮೀ ಉದ್ದದ 218 ಮೀನುಗಾರಿಕೆ ಕೊಂಡಿ ರಸ್ತೆಗಳಿರುತ್ತವೆ. ಸದರಿ ಮೀನುಗಾರಿಕೆ ಕೊಂಡಿ ರಸ್ತೆಗಳ ದುರಸ್ತಿ, ಅಭಿವೃದ್ಧಿ ಮತ್ತು ನಿರ್ವಹಣೆಗೆ 2021-22 ರಲ್ಲಿ ರೂ. 1.00 ಲಕ್ಷ ಹಂಚಿಕೆ ಮಾಡಲಾಗಿದೆ, ಆದರೆ ಸದರಿ ಯೋಜನೆಯಡಿ ಯಾವುದೇ ಅನುದಾನ ಬಿಡುಗಡೆ ಯಾ ವೆಚ್ಚಗಳು ಆಗಿರುವುದಿಲ್ಲ.

## 4.0. ಒಳನಾಡು ಮೀನುಗಾರಿಕೆ:

2021-22ರಲ್ಲಿ ಇಲಾಖೆಯ ಮೀನುಮರಿ ಉತ್ಪಾದನಾ ಕೇಂದ್ರಗಳಲ್ಲಿ 7669.06 ಲಕ್ಷ ಮೀನುಮರಿಗಳನ್ನು ಉತ್ಪಾದಿಸಲಾಗಿದ್ದು 3346 ಇಲಾಖಾ ಕೆರೆಗಳಿಗೆ 2706.79ಲಕ್ಷ ಬಲಿತ ಮೀನುಮರಿಗಳನ್ನು ದಾಸ್ತಾನು ಮಾಡಿ ಅಭಿವೃದ್ಧಿಪಡಿಸಲಾಗಿದ್ದು, ಅಂದಾಜು 4.84ಲಕ್ಷ ಮೆ.ಟನ್ ಮೀನು ಉತ್ಪಾದಿಸಲಾಗಿದೆ.

## 4.1 ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ (2405-00-101-0-03):

ರಾಜ್ಯದಲ್ಲಿ ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ ಯೋಜನೆಯಡಿ ಇರುವ ಹಲವಾರು ಉಪಯೋಜನೆಗಳಡಿ ಸಾಧಿಸಿರುವ ಪ್ರಗತಿಯನ್ನು ಈ ಕೆಳಕಾಣಿಸಿದೆ.

ಈ ಯೋಜನೆಯಡಿ ನೀಡಲಾಗಿರುವ ಅನುದಾನವನ್ನು ಮೀನುಮರಿ ಕೇಂದ್ರದಲ್ಲಿ ಮೀನುಮರಿ ಉತ್ಪಾದನೆಗೆ, ಫಾರಂಗಳಲ್ಲಿ ಹಾಗೂ ತಾಲ್ಲೂಕು ಮಟ್ಟದ ನರ್ಸರಿಗಳಲ್ಲಿ ಮೀನುಮರಿ ಪಾಲನೆಗೆ ಹಾಗೂ ನಿರ್ವಹಣೆಗೆ ತಗಲುವ ವೆಚ್ಚಗಳಿಗೆ, ಮೀನು ಮರಿ ಸಾಗಾಣಿಕೆ ವಾಹನಗಳ ಖರೀದಿ, ಮೀನು ಮರಿ ಖರೀದಿ ಮತ್ತು ಸಾಗಾಣಿಕೆಗೆ, ವಾಹನಗಳ ನಿರ್ವಹಣೆ ಮತ್ತು ಸಿಬ್ಬಂದಿ ವೆಚ್ಚಗಳಿಗೆ ವಿನಿಯೋಗಿಸಲಾಗುತ್ತಿದೆ.

- ಈ ಯೋಜನೆಯಡಿ ಮೀನುಮರಿ ಬೆಲೆಯ ಶೇ.50ರಷ್ಟು ಅಂದರೆ ವ್ಯಯಕ್ತಿಕವಾಗಿ ಗರಿಷ್ಠ ರೂ.5,000/- ಹಾಗೂ ಸಂಘ ಸಂಸ್ಥೆಗಳಿಗೆ ಗರಿಷ್ಠ ರೂ.20,000/-ಗಳ ಮಿತಿಗೊಳಪಟ್ಟು ಸಹಾಯಧನ ನೀಡಲಾಗುವುದು. ಮೀನುಗಾರಿಕೆ ಇಲಾಖೆಯಲ್ಲಿ ನೋಂದಾಯಿಸಿರುವ ಸ್ವಂತ ಕೊಳಗಳಲ್ಲಿ ಮೀನು ಮರಿ ಪಾಲನೆ ಕೈಗೊಳ್ಳಲು ಆಸಕ್ತರಿರುವ ಮೀನು ಕೃಷಿಕರು ಪ್ರತಿ ಹೆಕ್ಟೇರ್ ಜಲವಿಸ್ತೀರ್ಣಕ್ಕೆ 50 ಲಕ್ಷ ಸ್ಪಾನ್ ಅಥವಾ 10 ಲಕ್ಷ ಫ್ರೈ ಖರೀದಿಸಲು ಶೇ.50ರಷ್ಟು ಗರಿಷ್ಠ ರೂ.25,000ಗಳ ಸಹಾಯಧನ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಸದರಿ ಯೋಜನೆಯಡಿ ರೂ.34.82ಲಕ್ಷ ಸಹಾಯಧನವನ್ನು 504 ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ.

- ರಾಜ್ಯದ ಒಳನಾಡು ಜಲಸಂಪನ್ಮೂಲಗಳ ಪ್ರತಿ ಹೆಕ್ಟೇರ್ ಉಪಯುಕ್ತತಾ ಜಲವಿಸ್ತೀರ್ಣಕ್ಕೆ 2000 ಬಲಿತ ಬಿತ್ತನೆ ಮೀನುಮರಿಗಳನ್ನು ಮೀನುಗಾರರ ಸಹಕಾರ ಸಂಘಗಳ ಮೂಲಕ ಉಚಿತವಾಗಿ ದಾಸ್ತಾನು ಮಾಡಲು **"ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ"** ಯೋಜನೆಗೆ ಮಂಜೂರಾತಿ ನೀಡಲಾಗಿದೆ. ಸದರಿ ಯೋಜನೆಯಡಿ ಮೀನುಗಾರರ ಸಹಕಾರ ಸಂಘಗಳ ಮುಖಾಂತರ 342 ಕೆರೆಗಳಲ್ಲಿ 9430ಹೆ ಪ್ರದೇಶದಲ್ಲಿ ಮೀನು ಮರಿ ಬಿತ್ತನೆ ಮಾಡಲು ರೂ.282.00 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

- **"**ಸಿಗಡಿ ಮತ್ತು ಹಿನ್ನೀರು ಮೀನು ಕೃಷಿ**"** ಹೊಸ ಯೋಜನೆಯಡಿ ಸಿಗಡಿ ಮತ್ತು ಮೀನು ಸಾಕಾಣಿಕೆ ಮತ್ತು ಹಿನ್ನೀರು ಕೃಷಿಯನ್ನು ಪ್ರೋತ್ಸಾಹಿಸಲು ಪ್ರತೀ ಹೆಕ್ಟೇರ್ ಘಟಕ ವೆಚ್ಚ ರೂ.1.00 ಲಕ್ಷಕ್ಕೆ ಶೇ.50ರಷ್ಟು ಸಹಾಯಧನವನ್ನು ನೀಡಲಾಗುತ್ತಿದೆ ಸದರಿ ಯೋಜನೆಯಡಿ 273 ಪಲಾನುಭವಿಗಳಿಗೆ ರೂ.74.62 ಲಕ್ಷ ವೆಚ್ಚ ಮಾಡಲಾಗಿದೆ.

- ಕೆರೆಗಳ / ಜಲಾಶಯಗಳ ಪಕ್ಕದಲ್ಲಿ ನಿರ್ಮಿಸುವ ಕೊಳಗಳಲ್ಲಿ ಮೀನು ಮರಿಗಳ ಪಾಲನೆ ಯೋಜನೆ". ಸದರಿ ಯೋಜನೆಯಡಿ ಕೆರೆಗಳ/ಜಲಾಶಯಗಳ ಪಕ್ಕದಲ್ಲಿ ನಿರ್ಮಿಸುವ ಕೊಳಗಳಲ್ಲಿ ಸ್ಪಾನ್ ಗ್ರಾತ್ರದ ಮೀನುಮರಿಗಳನ್ನು 80-100ಮಿಮೀ ಫಿಂಗರ್‌ಲಿಂಗ್ಸ್ ಗಾತ್ರಕ್ಕೆ ಬೆಳೆಯುವವರೆಗೆ ಪಲನೆ ಮಾಡಲಾಗುತ್ತದೆ. ಇದು ಮೀನು ಮರಿಗಳ ಖರೀದಿ ವೆಚ್ಚವನ್ನು ಕಡಿಮೆ ಮಾಡುವುದರೊಂದಿಗೆ ಸಾಗಾಣಿಕೆ ವೆಚ್ಚವನ್ನು ಮತ್ತು ಸಾಗಾಣಿಕೆಯಲ್ಲಿ ಮರಣ ಹೊಂದುವ ಮೀನುಮರಿಗಳ ಪ್ರಮಾಣವನ್ನು ಕಡಿಮೆಗೊಳಿಸುತ್ತದೆ. ಕೆರೆಗಳ/ಜಲಾಶಯಗಳ ಪಕ್ಕದಲ್ಲಿ ಕೊಳ ನಿರ್ಮಿಸಿ ಮೀನುಮರಿಗಳನ್ನು ಪಾಲನೆ ಮಾಡಲು ಗರಿಷ್ಠ ರೂ.2.50ಲಕ್ಷ (ಶೇ.100)ರಂತೆ ಸಹಾಯಧನ ನೀಡಲು ಯೋಜನೆಯನ್ನು ರೂಪಿಸಲಾಗಿದ್ದು, 2021-22ನೇ ಸಾಲಿನಲ್ಲಿ 41.00 ಹೆ ಕೊಳಗಳಲ್ಲಿ ಮೀನುಮರಿಗಳನ್ನು ಪಾಲನೆ ಮಾಡಲು ಒಟ್ಟು ರೂ.102.70 ಲಕ್ಷ ಸಹಾಯಧನ ನೀಡಲಾಗಿದೆ.

- ಮೀನು ಮರಿಗಳ ಉತ್ಪಾದನಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ರೂ.200.00ಲಕ್ಷಗಳನ್ನು ಬಜೆಟ್ ಭಾಷಣದಲ್ಲಿ ಘೋಷಿಸಲಾಗಿದೆ. ಸದರಿ ಯೋಜನೆಯಡಿ ಮೀನು ಮರಿಗಳ ಉತ್ಪಾದನಾ ಕೇಂದ್ರಗಳನ್ನು ಉನ್ನತೀಕರಿಸಲು/ ಆಧುನೀಕರಿಸಲು ರೂ.200.00ಲಕ್ಷಗಳನ್ನು ವಿನಿಯೋಗಿಸಲಾಗಿದ್ದು, ಹೆಚ್ಚಿನ ಪ್ರಮಾಣದಲ್ಲಿ ಉತ್ತಮ ಗುಣಮಟ್ಟದ ಮೀನುಮರಿಗಳನ್ನು ಉತ್ಪಾದಿಸಲಾಗಿದೆ.

●2021–22 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.605.00 ಲಕ್ಷಗಳ ಹಚಿಚಿಕೆ ಮಾಡಲಾಗಿರುತ್ತದೆ. ಯಾಂತ್ರೀಕೃತ ಮೀನುಗಾರಿಕೆ ದೋಣಿಗಳು ಬಳಸುವ "ಡೀಸೆಲ್–ಮಾರಾಟ ತೆರಿಗೆ ಮರುಪಾವತಿ ಯೋಜನೆ"ಯಿಂದ ರೂ.100.00 ಲಕ್ಷಗಳನ್ನು ಪುನರ್ವಿನಿಯೋಗ ಮಾಡಿ ಒಟ್ಟು ರೂ.705.00ಲಕ್ಷಗಳ ಅನುದಾನ ಒದಗಿಸಲಾಗಿರುತ್ತದೆ. ಇದರಲ್ಲಿ ರೂ.10.00ಲಕ್ಷಗಳನ್ನು ನಿರ್ದೇಶನ ಮತ್ತು ಆಡಳಿತ(051)ಕ್ಕೆ ಪುನರ್ವಿನಿಯೋಗ ಮಾಡಲಾಗಿದ್ದು ಒಟ್ಟು ರೂ.694.14ಲಕ್ಷ ವೆಚ್ಚ ಮಾಡಲಾಗಿದ್ದು ವಿವರ ಈ ಕೆಳಕಾಣಿಸಿದೆ.

| ಕ್ರಸಂ | ಯೋಜನೆ | ವೆಚ್ಚ | ಫಲಾನುಭವಿಗಳ/ ತೊಟ್ಟಿಗಳ ಸಂಖ್ಯೆ | ಅಭಿವೃದ್ಧಿ ಪಡಿಸಲಾದ ವಿಸ್ತೀರ್ಣ (ಹೆ.ಗಳಲ್ಲಿ) | ದಾಸ್ತಾನು ಮಾಡಿದ ಮೀನುಮರಿಗಳ ಸಂಖ್ಯೆ (ಲಕ್ಷ.ಗಳಲ್ಲಿ) |
|---|---|---|---|---|---|
| 1. | ಮೀನುಮರಿ ಖರೀದಿಗೆ ಸಹಾಯ | 34.82 | 504 | 9900 | 198.00 |
| 2. | ಕೆರೆ ಮತ್ತು ಜಲಾಶಯದ ಅಂಚಿನಲ್ಲಿ ಮೀನುಮರಿ ಪಾಲನಾ ಕೊಳ ನಿರ್ಮಾಣ | 102.70 | 62 | 41 | 205.00 |
| 3. | ಒಳನಾಡು ಮೀನು ಕೃಷಿಗೆ ಪ್ರೋತ್ಸಹ | 282.00 | 342 | 10930 | 218.00 |
| 4. | ಸೀಗಡಿ ಮತ್ತು ಹಿನ್ನೀರು ಮೀನು ಕೃಷಿ | | | | |
| | ಪಂಜರದಲ್ಲಿ ಮೀನು ಕೃಷಿ | 47.35 | 246 | | |
| | ಸೀಗಡಿ ಮೀನು ಕೃಷಿ | 27.27 | 27 | 54 | |
| 5. | ಮೀನುಮರಿ ಪಾಲನಾ ಕೇಂದ್ರಗಳ ಅಭಿವೃದ್ಧಿ | 200.00 | | | |
| | **ಒಟ್ಟು** | **694.14** | **273** | | |

## 4.2 ಜಲಾಶಯದಲ್ಲಿ ಮೀನು ಮರಿ ಬಿತ್ತನೆ (2405–00–101–0–54)

ರಾಜ್ಯದಲ್ಲಿ 2.72 ಲಕ್ಷ ಹೆಕ್ಟೇರ್ ಜಲ ವಿಸ್ತೀರ್ಣವುಳ್ಳ ಒಟ್ಟು 82 ಜಲಾಶಯಗಳಿವೆ. ಸಾವಿರಾರು ಮೀನುಗಾರರ ಕುಟುಂಬಗಳು ಅವರ ಜೀವನೋಪಾಯಕ್ಕಾಗಿ ಜಲಾಶಯಗಳನ್ನು ಅವಲಂಬಿಸಿವೆ. ಇತ್ತೀಚಿನ ದಿನಗಳಲ್ಲಿ ನದಿಗಳಲ್ಲಿ ಮತ್ತು ಹಲವಾರು ಜಲಾಶಯಗಳಲ್ಲಿ ಮತ್ಸ್ಯ ಸಂಪನ್ಮೂಲಗಳು ಕ್ಷೀಣಿಸಿದ್ದು ಹೆಚ್ಚಿನ ಮೀನು ಹಿಡುವಳಿ ಮಾಡಲು ಕೊರತೆಯಾಗಿರುವ್ಯದರಿಂದ, ಇದನ್ನೇ ಅವಲಂಬಿಸಿರುವ ಮೀನುಗಾರರು ಸಂಕಷ್ಟಕ್ಕೊಳಗಾಗಿದ್ದಾರೆ. ಶೀಘ್ರವಾಗಿ ಬೆಳೆಯುವ ಗೆಂಡೆ ಮೀನುಗಳಾದ ಕಟ್ಲಾ, ರೋಹು, ಮೃಗಾಲ್ ತಳಿಗಳು ಜಲಾಶಯಗಳಲ್ಲಿ ಸ್ವಾಭಾವಿಕವಾಗಿ ಮೀನುಮರಿಗಳನ್ನು ಉತ್ಪಾದಿಸದಿರುವುದರಿಂದ ಸದರಿ ತಳಿಗಳ ಮೀನುಮರಿಗಳನ್ನು ಕಾಲಕಾಲಕ್ಕೆ ದಾಸ್ತಾನು ಮಾಡುವ ಮೂಲಕ ಜಲಾಶಯಗಳಲ್ಲಿ ಮತ್ಸ್ಯ ಸಂಪನ್ಮೂಲವನ್ನು ವೃದ್ಧಿಗೊಳಿಸುವುದು ಅತ್ಯಗತ್ಯವಾಗಿದೆ.

ಈ ಯೋಜನೆಯಡಿ ರಾಜ್ಯದ ಆಯ್ದ ಜಲಾಶಯಗಳಲ್ಲಿ ಬಲಿತ ಮೀನು ಮರಿಗಳ ಬಿತ್ತನೆ ಮಾಡಿ ಜಲಾಶಯಗಳ ಅಭಿವೃದ್ಧಿ ಕೈಗೊಳ್ಳಲಾಗುತ್ತದೆ. 2021–22 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.200.00 ಲಕ್ಷಗಳನ್ನು ಒದಗಿಸಲಾಗಿದೆ. ಮೀನುಗಾರಿಕೆ ದೋಣಿಗಳಿಗೆ ಡೀಸೆಲ್–ಮಾರಾಟ ತೆರಿಗೆ ಮರುಪಾವತಿ ಯೋಜನೆಯಿಂದ ರೂ.100.00 ಲಕ್ಷಗಳನ್ನು ಪುನರ್ವಿನಿಯೋಗ ಮಾಡಿ, ಸದರಿ ಯೋಜನೆಯಡಿ ಒಟ್ಟು ರೂ.300.00 ಲಕ್ಷ ಅನುದಾನ ಒದಗಿಸಲಾಗಿದೆ. ರಾಜ್ಯದ ಆಯ್ದ 38 ಜಲಾಶಯಗಳಲ್ಲಿ 220.00 ಲಕ್ಷ ಬಲಿತ ಮೀನುಮರಿಗಳನ್ನು ದಾಸ್ತಾನು ಮಾಡಿ ರೂ.299.69 ಲಕ್ಷ ವೆಚ್ಚ ಮಾಡಲಾಗಿದೆ.

## 4.3 ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ (2405–00–110–0–02)

"ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ" ಎಂಬ ಯೋಜನೆಯಡಿ ಕರಾವಳಿ ಮತ್ತು ಒಳನಾಡಿನಲ್ಲಿ ಸಾಂಪ್ರದಾಯಿಕ ಮೀನುಗಾರರಿಗೆ ಮೀನು ಹಿಡುವಳಿಗೆ ಬೇಕಾದ ಬಲೆ, ಮತ್ತು ಪೂರಕ ಸಾಮಗ್ರಿಗಳನ್ನು ಕಿಟ್ ರೂಪದಲ್ಲಿ ಶೇ.100ರಷ್ಟು ಸಹಾಯಧನ ನೀಡಲಾಗುವುದು. ಸಮುದ್ರ ಮೀನುಗಾರರಿಗೆ ಒಟ್ಟು ರೂ.2,500/– ಮೌಲ್ಯದ ಲೈಫ್ ಜಾಕೆಟ್‌ಗಳನ್ನು, ಲೈಫ್‌ಬಾಯ್‌ಗಳನ್ನು, ಶಾಖನಿರೋಧಕ ಬಾಕ್ಸ್‌ಗಳನ್ನು/ಪ್ಲಾಸ್ಟಿಕ್ ಬಾಕ್ಸ್‌ಗಳನ್ನು ಮತ್ತು ಒಳನಾಡು ಮೀನುಗಾರರಿಗೆ ರೂ.10,000/– ಮೌಲ್ಯದ 2ಹುಟ್ಟುಗಳೊಂದಿಗೆ ಹರಿಗೋಲನ್ನು ಮೀನುಗಾರಿಕೆ ಬಲೆಯನ್ನು ಉಚಿತವಾಗಿ ವಿತರಿಸಲಾಗಿದೆ.

2021–22ನೇ ಸಾಲಿನಲ್ಲಿ ಸದರಿ ಯೋಜನೆಗೆ ರೂ.125.00ಲಕ್ಷಗಳ ಅನುದಾನವನ್ನು ಒದಗಿಸಲಾಗಿದ್ದು 1620 ಫಲಾನುಭವಿಗಳಿಗೆ ಸಲಕರಣೆ ಕಿಟ್ಟುಗಳನ್ನು ವಿತರಿಸಲು ರೂ.124.94 ಲಕ್ಷ ವೆಚ್ಚ ಮಾಡಲಾಗಿದೆ.

# 5. ಮೀನುಗಾರರ ಕಲ್ಯಾಣ ಯೋಜನೆಗಳು:

## 5.1 ಸಂಕಷ್ಟ ಪರಿಹಾರ ನಿಧಿ (2405–00–103–0–15):

ಸಂಕಷ್ಟ ಪರಿಹಾರ ನಿಧಿಗೆ ಸರ್ಕಾರದಿಂದ ಮೂಲ ಬಂಡವಾಳ ನೀಡುವ ಸಲುವಾಗಿ ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ನಿಧಿಯಿಂದ ಮೀನುಗಾರಿಕೆಯಲ್ಲಿ ತೊಡಗಿರುವಾಗ ನೈಸರ್ಗಿಕ ವಿಕೋಪಗಳಿಂದ ಸಂಭವಿಸುವ ದೋಣಿ ಅವಘಡಗಳಲ್ಲಿ ಮೃತರಾಗುವ ಮೀನುಗಾರರ ಆವಲಂಬಿತರಿಗೆ ರೂ.6,00,000/–ಗಳ ಪರಿಹಾರ ಮತ್ತು ಭಾಗಶಃ ಅಂಗವಿಕಲರಾದವರಿಗೆ ರೂ.2,50,000ಗಳ ಪರಿಹಾರ ನೀಡಲು ಹಾಗೂ ಬಲೆಹಾನಿ, ದೋಣಿಹಾನಿ ವೆಚ್ಚಗಳಿಗೆ ಮತ್ತು ವೈದ್ಯಕೀಯ ವೆಚ್ಚಗಳಿಗೆ ಗರಿಷ್ಠ ರೂ.25,000/– ನೆರವು ನೀಡಲು ಅವಕಾಶವಿದೆ.

2021–22 ನೇ ಸಾಲಿನಲ್ಲಿ ಸದರಿ ಯೋಜನೆಯ ನಿಧಿಗೆ ರೂ.1.00 ಲಕ್ಷ ಪಾವತಿಸಲಾಗಿಗು, 87 ಪ್ರಕರಣಗಳನ್ನು ಇತ್ಯರ್ಥಗೊಳಿಸಿ ಮೀನುಗಾರರಿಗೆ ಒಟ್ಟು ರೂ.340.57 ಲಕ್ಷ ಪರಿಹಾರ ನೀಡಲಾಗಿದೆ.

| ಜಿಲ್ಲೆ | ಮರಣ ಪ್ರಕರಣಗಳು | | ದೋಣಿ/ಬಲೆ ಹಾನಿ ಪ್ರಕರಣಗಳು | | ವೈದ್ಯಕೀಯ ಪ್ರಕರಣಗಳು | | ಒಟ್ಟು | |
|---|---|---|---|---|---|---|---|---|
| | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| ಉಡುಪಿ | 12 | 75.00 | 8 | 6.24 | | | 20 | 81.24 |
| ದಕ್ಷಿಣ ಕನ್ನಡ | 4 | 24.00 | 3 | 1.00 | | | 7 | 25.00 |
| ಉತ್ತರ ಕನ್ನಡ | 22 | 129.00 | 18 | 12.33 | 1 | 2.00 | 41 | 143.33 |
| ಶಿವಮೊಗ್ಗ | 8 | 28.00 | | | | | 8 | 28.00 |
| ಬೆಳಗಾವಿ | 6 | 36.00 | | | | | 6 | 36.00 |
| ಬಳ್ಳಾರಿ | 5 | 27.00 | | | | | 5 | 27.00 |
| **ಒಟ್ಟು** | **57** | **319** | **29** | **19.57** | **1** | **2.00** | **87** | **340.57** |

## 5.2 ಸಾಮೂಹಿಕ ಅಪಘಾತ ವಿಮಾ ಯೋಜನೆ (2405–00–120–0–07–106):

ಈ ಕೇಂದ್ರ ಪುರಸ್ಕೃತ ಅಪಘಾತ ವಿಮಾ ಯೋಜನೆಯಡಿ, ಮೀನುಗಾರರು ಹಾಗೂ ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳಲ್ಲಿ ನೇರವಾಗಿ ತೊಡಗಿಸಿಕೊಂಡಿರುವ ಇತರೆ ವರ್ಗದ ಮೀನುಗಾರರು ಸಾಮೂಹಿಕ ಅಪಘಾತ ವಿಮೆಯ ಪ್ರಯೋಜನ ಪಡೆಯಬಹುದು. ಸದರಿ ಯೋಜನೆಯಡಿ 18 ರಿಂದ 70 ವರ್ಷ ವಯಸ್ಸಿನ ಪುರುಷರು ಅಥವಾ ಮಹಿಳಾ ಮೀನುಗಾರರು ಈ ಕೆಳಗಿನಂತೆ ವಿಮಾ ರಕ್ಷಣೆಗೆ ಅರ್ಹರಾಗಿರುತ್ತಾರೆ:

1. ಮರಣ ಅಥವಾ ಶಾಶ್ವತ ಸಂಪೂರ್ಣ ಅಂಗವೈಕಲ್ಯ ಹೊಂದಿದ ಮೀನುಗಾರರಿಗೆ ರೂ.6.00 ಲಕ್ಷ.
2. ಶಾಶ್ವತ ಭಾಗಶಃ ಅಂಗವೈಕಲ್ಯ ಹೊಂದಿದ ಮೀನು ಮೀನುಗಾರರಿಗೆ ರೂ.2.50 ಲಕ್ಷ.
3. ಆಕಸ್ಮಿಕ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾದ ಮೀನುಗಾರರಿಗೆ ರೂ.25,000.

ವಿಮಾ ಯೋಜನೆಯನ್ನು ಕಾರ್ಯಗತಗೊಳಿಸಲು NFDBಯನ್ನು ನೋಡಲ್ ಏಜೆನ್ಸಿ ಎಂದು ನಿಗದಿಪಡಿಸಲಾಗಿದ್ದು, ಸದರಿ ಯೋಜನೆಯನ್ನು ಮೆ. ಓರಿಯಂಟಲ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್ (OICL) ಮೂಲಕ ಜಾರಿಗೊಳಿಸಲಾಗಿದೆ. ಪ್ರತಿ ಮೀನುಗಾರನಿಗೆ ಸಂಪೂರ್ಣ ಪ್ರೀಮಿಯಂ ಮೊತ್ತವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳವತಿಯಿಂದ 60:40 ಅನುಪಾತದಲ್ಲಿ ಪಾವತಿಸಲಾಗುತ್ತದೆ. 43,091 ನೋಂದಾಯಿತ ಮೀನುಗಾರರ ವಿಮೆಯನ್ನು ಸರಿದೂಗಿಸಲು NFDBಗೆ ರೂ 12.49 ಲಕ್ಷ ರೂಪಾಯಿಗಳನ್ನು ಪಾವತಿಸಲಾಗಿದೆ.

## 5.3 ಕರಾವಳಿ ಮೀನುಗಾರರಿಗೆ ಕೇಂದ್ರ ಪುರಸ್ಕೃತ ಉಳಿತಾಯ ಮತ್ತು ಪರಿಹಾರ ಯೋಜನೆ (2405–00–120–0–07–100):

ಸದರಿ ಯೋಜನೆಯಡಿ ಮೀನುಗಾರಿಕೆ ಅವಧಿಯಲ್ಲಿ ಕರಾವಳಿ ಮೀನುಗಾರರು ರೂ.1500/–ಗಳನ್ನು ಪಾವತಿ ಮಾಡುತ್ತಿದ್ದು, ಈ ರೀತಿ ಪಾವತಿ ಮಾಡಿದ ಮೊತ್ತ ರೂ.1500/–ಗಳಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ತಲಾ ರೂ.1500/–ಗಳನ್ನು ನೀಡಿ, ಹೀಗೆ ಸಂಗ್ರಹಿಸಿದ ಒಟ್ಟು ರೂ.4500/–ಗಳನ್ನು ನಿಷೇಧಿತ ಮೀನುಗಾರಿಕೆ ಅವಧಿಯ (ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್) ತಿಂಗಳುಗಳಲ್ಲಿ ಮಾಸಿಕ ರೂ.1500/–ರಂತೆ 3 ತಿಂಗಳು ಮೀನುಗಾರರಿಗೆ ಪಾವತಿಸಲಾಗುವುದು. ಸದರಿ ಯೋಜನೆಯಡಿಯಲ್ಲಿ ರೂ.496.00 ಲಕ್ಷಗಳ ಅನುದಾನ ಕಲ್ಪಿಸಲಾಗಿರುತ್ತದೆ. ಸದರಿ ಯೋಜನೆಯಡಿ 24,002 ಫಲಾನುಭವಿಗಳಿಗೆ ರೂ.720.12 ಲಕ್ಷಗಳನ್ನು ನೀಡಲಾಗಿದೆ.

ಇದಲ್ಲದೆ ರಾಜ್ಯ ಸರ್ಕಾರ ಘೋಷಿಸಿದ ಕೋವಿಡ್ ಪರಿಹಾರ ಪ್ಯಾಕೇಜ್–2ನ್ನು ಅನುಷ್ಠಾನಗೊಳಿಸಲು ಮೀನುಗಾರಿಕಾ ದೋಣಿಗಳು ಬಳಸುವ ಡೀಸೆಲ್ ಮೇಲಿನ ಮಾರಾಟ ತೆರಿಗೆ ಮರುಪಾವತಿ ಯೋಜನೆಯಿಂದ ರೂ.562.00ಲಕ್ಷಗಳನ್ನು ಮರುವಿನಿಯೋಗಿಸಲಾಗಿದೆ. ರೂ.502.95ಲಕ್ಷಗಳನ್ನು ಈ ಉದ್ದೇಶಕ್ಕಾಗಿ ಬಳಸಿದ್ದು 16765 ಫಲಾನುಭವಿಗಳು ಈ ಯೋಜನೆಯ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ. ಸದರಿ ಯೋಜನೆಯಡಿ ರೂ.1534.48 ಲಕ್ಷ ಬಿಡುಗಡೆಯಾಗಿದ್ದು ರೂ.1534.48 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

| ಕ್ರ ಸಂ | ಜಿಲ್ಲೆ | ಫಲಾನುಭವಿಗಳ ಸಂಖ್ಯೆ | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1 | **ದಕ್ಷಿಣ ಕನ್ನಡ** | 1231 | 36.93 |
| 2 | **ಉಡುಪಿ** | 11837 | 355.11 |
| 3 | **ಉತ್ತರ ಕನ್ನಡ** | 7346 | 234.35 |
| 4 | SNA **ಖಾತೆಗೆ ವರ್ಗಾಯಿಸಿದ್ದು** | 0.00 | 405.14 |
| 5 | **ಕೋವಿಡ್ ಪ್ಯಾಕೇಜ್–2 ಉಳಿಯಾಯ ಮತ್ತು ಪರಿಹಾರ** | 16765 | **502.95** |
| | **ಒಟ್ಟು** | **37179** | **1534.48** |

## 5.4 ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ (2405–00–101–0–66)

ಈ ಯೋಜನೆಯಡಿ ಮೀನುಗಾರಿಕೆ ಚಟುವಟಿಕೆಗಳಲ್ಲಿ ತೊಡಗಿರುವ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಕ್ಕೆ ಸೇರಿದ ಫಲಾನುಭವಿಗಳಿಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. 2021–22 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ಮೀನುಗಾರಿಕೆ ಸಲಕರಣೆ ಕಿಟ್ ವಿತರಣೆಗೆ ಅವಕಾಶ ಮಾಡಲಾಗಿದೆ. 2021–22ನೇ ಸಾಲಿನಲ್ಲಿ ರೂ.35.35ಲಕ್ಷ ಅನುದಾನ ನಿಗದಿಪಡಿಸಲಾಗಿದ್ದು, ರೂ.35.21 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. 19 ಫಲಾನುಭವಿಗಳು ತ್ರಿಚಕ್ರ ವಾಹನಗಳನ್ನು ಮತ್ತು 10 ಫಲಾನುಭವಿಗಳು ಮೀನುಗಾರಿಕೆ ಸಲಕರಣೆ ಕಿಟ್ಟುಗಳನ್ನು ಖರೀದಿಸಿರುತ್ತಾರೆ.

## 5.5 ಮಾನ್ಯ ಮುಖ್ಯ ಮಂತ್ರಿಗಳ ಕೋವಿಡ್ ಪರಿಹಾರ ಪ್ಯಾಕೇಜ್–2

ಕೋವಿಡ್–19 ಸಾಂಕ್ರಾಮಿಕ ರೋಗದಿಂದಾಗಿ ಮೀನುಗಾರಿಕೆ ವಲಯವು ಸತತ 02 ವರ್ಷಗಳಿಂದ ಎದುರಿಸುತ್ತಿರುವ ಸಂಕಷ್ಟಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರವು ಮೀನುಗಾರಿಗೆ ಪರಿಹಾರ ಪ್ಯಾಕೇಜ್–2 ಸೌಲಭ್ಯವನ್ನು ಘೋಷಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

### ಎ. ಸಮುದ್ರ ಮೀನುಗಾರರಿಗೆ ಉಳಿತಾಯ ಮತ್ತು ಪರಿಹಾರ ಯೋಜನೆ:

ಈ ಪ್ಯಾಕೇಜ್ ಅಡಿಯಲ್ಲಿ ಸರ್ಕಾರವು ಕರಾವಳಿಯ ಎಲ್ಲಾ 18,746 ಮೀನುಗಾರರಿಗೆ ತಲಾ ರೂ.3000ಗಳ ಆರ್ಥಿಕ ಪರಿಹಾರವನ್ನು ನೀಡಲು ನಿರ್ಧರಿಸಿರುತ್ತದೆ. ಈ ಉದ್ದೇಶಕ್ಕಾಗಿ ರೂ.562.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಮೀನುಗಾರಿಕಾ ದೋಣಿ ಬಳಸುವ ಡೀಸೆಲ್ ಮೇಲಿನ ರಾಜ್ಯ ಮಾರಾಟ ತೆರಿಗೆ ಮರುಪಾವತಿ ಯೋಜನೆಯಡಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದ ಆದೇಶದಲ್ಲಿ ಉಲ್ಲೇಖಿಸಲಾಗಿದೆ. ಆದಾಗ್ಯೂ, ತಾಂತ್ರಿಕ ಮತ್ತು ಆಡಳಿತಾತ್ಮಕ ವಿಳಂಬವನ್ನು ತಪ್ಪಿಸಲು ಈ ಯೋಜನೆಯಡಿ ನೀಡಿದ ಅನುದಾನವನ್ನು ರೂ.562.00ಲಕ್ಷಗಳ ಉಳಿತಾಯ ಮತ್ತು ಪರಿಹಾರ ಯೋಜನೆಗೆ ಪ್ಯಾಕೇಜ್ ಅಡಿಯಲ್ಲಿ ವರ್ಗಾಯಿಸಲು ಸರ್ಕಾರವನ್ನು ವಿನಂತಿಸಲಾಗಿರುತ್ತದೆ. ಅದರಂತೆ ಉಳಿತಾಯ ಮತ್ತು ಪರಿಹಾರ ಯೋಜನೆಗೆ ಪ್ಯಾಕೇಜ್ ಅಡಿಯಲ್ಲಿ 562.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿರುತ್ತದೆ.

### ಬಿ. ಸಾಂಪ್ರದಾಯಿಕ ದೋಣಿಗಳ ಮಾಲೀಕರಿಗೆ ಆರ್ಥಿಕ ನೆರವು:

ರಾಜ್ಯದ ಮೂರು ಕರಾವಳಿ ಜಿಲ್ಲೆಗಳಲ್ಲಿ ಒಟ್ಟು 7668 ಸಾಂಪ್ರದಾಯಿಕ ಮೀನುಗಾರಿಕೆ ದೋಣಿಗಳು ಕಾರ್ಯನಿರ್ವಹಿಸುತ್ತಿವೆ. ಕೋವಿಡ್–19 ಸಾಂಕ್ರಾಮಿಕ ರೋಗ ಹರಡದಂತೆ ಸರ್ಕಾರ ಪ್ರಕಟಿಸಿದ ಲಾಕ್‌ಡೌನ್‌ನಿಂದಾಗಿ ಕರಾವಳಿಯ ಮೀನುಗಾರರು ತೀವ್ರವಾಗಿ ತೊಂದರೆಗೊಳಗಾಗಿರುತ್ತಾರೆ.ಆದ್ದರಿಂದ ಸರ್ಕಾರವು ರಾಜ್ಯದಲ್ಲಿರುವ ಎಲ್ಲಾ 7668 ಸಾಂಪ್ರದಾಯಿಕ ಮೀನುಗಾರಿಕೆ ದೋಣಿಗಳ ಮಾಲೀಕರಿಗೆ ರೂ.3000/–ಗಳ ಆರ್ಥಿಕ ಪ್ಯಾಕೇಜ್ ಘೋಷಿಸಿದೆ. ಈ ಉದ್ದೇಶಕ್ಕಾಗಿ 230.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿರುತ್ತದೆ.

ಕೋವಿಡ್ ಪರಿಹಾರ ಪ್ಯಾಕೇಜ್–2 ಅಡಿಯಲ್ಲಿ ಒಟ್ಟು ರೂ.792.00 ಲಕ್ಷ ಬಿಡುಗಡೆಯಾಗಿದ್ದು, ರೂ.654.66 ಲಕ್ಷಗಳನ್ನು ಮೇಲಿನ ಉದ್ದೇಶಕಾಗಿ ಬಳಸಿಕೊಳ್ಳಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

| ಜಿಲ್ಲೆ | ಉಳಿತಾಯ ಮತ್ತು ಪರಿಹಾರ ಯೋಜನೆ | | ಸಾಂಪ್ರದಾಯಿಕ ದೋಣಿ ಮಾಲೀಕರಿಗೆ ಆರ್ಥಿಕ ನೆರವು | | ಒಟ್ಟು | |
|---|---|---|---|---|---|---|
| | ಮೊತ್ತ (ರೂ.ಲಕ್ಷ) | ಫಲಾನುಭವಿಗಳ ಸಂಖ್ಯೆ | ಮೊತ್ತ (ರೂ.ಲಕ್ಷ) | ಫಲಾನುಭವಿಗಳ ಸಂಖ್ಯೆ | ಮೊತ್ತ (ರೂ.ಲಕ್ಷ) | ಫಲಾನುಭವಿಗಳ ಸಂಖ್ಯೆ |
| ದಕ್ಷಿಣ ಕನ್ನಡ | 38.94 | 1298 | 7.20 | 240 | 46.14 | 1538 |
| ಉಡುಪಿ | 289.56 | 9652 | 23.16 | 772 | 312.72 | 10424 |
| ಉತ್ತರ ಕನ್ನಡ | 174.45 | 5815 | 121.35 | 4045 | 295.80 | 9860 |
| **ಒಟ್ಟು** | **502.95** | **16765** | **151.71** | **5057** | **654.66** | **21822** |

## 6. ಇತರೆ ಯೋಜನೆಗಳು:

## 6.1 ವಾಣಿಜ್ಯ ಬ್ಯಾಂಕುಗಳಿಗೆ ಬಡ್ಡಿ ವ್ಯತ್ಯಾಸವನ್ನು ತುಂಬಿ ಕೊಡುವುದು (2405–00–800–0–28):

ಮೀನುಗಾರರು ಮೀನುಗಾರಿಕೆ ಚಟುವಟಿಕೆ ಕೈಗೊಳ್ಳಲು ವಾಣಿಜ್ಯ ಬ್ಯಾಂಕಿನಿಂದ ಶೇ.2 ರ ಬಡ್ಡಿ ದರದಲ್ಲಿ ರೂ.50,000/–ಗಳವರೆಗೆ ಸಾಲ ಪಡೆಯಲು ಅವಕಾಶವಿರುತ್ತದೆ. ವಾಣಿಜ್ಯ ಬ್ಯಾಂಕುಗಳು ಮೀನುಗಾರರಿಗೆ ಸಾಲ ನೀಡಿದ ಪ್ರಯುಕ್ತ ವ್ಯತ್ಯಾಸದ ಬಡ್ಡಿಯನ್ನು ತುಂಬಿಕೊಡಲು ಅವಕಾಶ ಕಲ್ಪಿಸಲಾಗಿದೆ.

2018–19ನೇ ಸಾಲಿನಿಂದ ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ಮಹಿಳಾ ಮೀನುಗಾರರಿಗೆ ರೂ.50,000/–ಗಳವರೆಗೆ ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ವಾಣಿಜ್ಯ / ಗ್ರಾಮೀಣ ಪ್ರಾದೇಶಿಕ ಬ್ಯಾಂಕ್‌ಗಳಿಂದ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

2021–22ನೇ ಸಾಲಿನಲ್ಲಿ ರೂ.50.00/–ಲಕ್ಷಗಳ ಅನುದಾನವನ್ನು ಈ ಯೋಜನೆಗೆ ಒದಗಿಸಲಾಗಿದ್ದು 1690 ಮೀನುಗಾರರ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ರೂ.50.00 ಲಕ್ಷ ವೆಚ್ಚ ಮಾಡಲಾಗಿದೆ.

## 6.2 ನೀಲಿ ಕ್ರಾಂತಿ – ಮೀನುಗಾರಿಕೆಯ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ (2405–00–101–0–58)

ಮೀನುಗಾರಿಕೆ ವಲಯದಲ್ಲಿ ಮಹತ್ತರ ಬೆಳವಣಿಗೆ ತರುವ ಸಲುವಾಗಿ ಕೇಂದ್ರ ಸರ್ಕಾರವು ಕೇಂದ್ರ ಪುರಸ್ಕೃತ ನೀಲಿ ಕ್ರಾಂತಿ–ಸಮಗ್ರ ಮೀನುಗಾರಿಕೆ ಅಭಿವೃದ್ಧಿ ಮತ್ತು ನಿರ್ವಹಣೆ (Blue Revolution: Integrated Development and Management of Fisheries) ಎಂಬ ಮಹತ್ವಾಕಾಂಕ್ಷಿ ಯೋಜನೆಯನ್ನು ಜಾರಿಗೆ ತರಲಾಗಿದೆ. ಸದರಿ ಯೋಜನೆಯಡಿ ಮೀನುಗಾರರ ಸಾಮಾಜಿಕ, ಆರ್ಥಿಕ ಮತ್ತು ಮೀನುಗಾರಿಕೆ ವಲಯದ ಸರ್ವತೋಮುಖ ಅಭಿವೃದ್ಧಿಗಾಗಿ ಸಾಮಾನ್ಯ ಮತ್ತು ಪ.ಜಾತಿ/ಪ.ಪಂಗಡ/ಮಹಿಳಾ ವರ್ಗಗಳಿಗೆ ಸೇರಿದ ಫಲಾನುಭವಿಗಳಿಗೆ ಕ್ರಮವಾಗಿ ನಿಯೋಜಿತ ಘಟಕದ ವೆಚ್ಚದ 40% ಮತ್ತು 60% ಆರ್ಥಿಕ ಸಹಾಯವನ್ನು ಪಡೆಯಬಹುದು. ಸಹಾಯವನ್ನು ರಾಜ್ಯ ಮತ್ತು ಕೇಂದ್ರವು 40:60 ಅನುಪಾತದಲ್ಲಿ ಭರಿಸುತ್ತವೆ.

ಕೇಂದ್ರ ಸರ್ಕಾರದ ಮೀನುಗಾರಿಕೆ ಇಲಾಖೆ, ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯದ ನಿರ್ದೇಶನದಂತೆ 2021–22ನೇ ಸಾಲಿನ ಪಿ.ಎಂ.ಎಂ.ಎಸ್.ವೈ ಯೋಜನೆಯ ಮಾರ್ಗಸೂಚಿಗಳ ಪ್ರಕಾರ ವಿವಿಧ ಘಟಕಗಳ ಅಡಿಯಲ್ಲಿ ರೂ.354.67 ಕೋಟಿಗಳ ಒಟ್ಟು ಯೋಜನಾ ವೆಚ್ಚಕ್ಕಾಗಿ ತಾತ್ಕಾಲಿಕ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಲ್ಲಿಸಲಾಗಿರುತ್ತದೆ. ಆದರೆ ಕೇಂದ್ರ ಸರ್ಕಾರವು ರೂ.230.09 ಕೋಟಿ ಮೌಲ್ಯದ ಫಲಾನುಭವಿ ಆಧಾರಿತ ಘಟಕಗಳಿಗೆ ಮಂಜೂರಾತಿ ಆದೇಶವನ್ನು ನೀಡಿದೆ ಮತ್ತು ಕೇಂದ್ರ ಸರ್ಕಾರ ರೂ. 35.25 ಕೋಟಿಗಳಿಗೆ ಬಿಡುಗಡೆ ಆದೇಶ ನೀಡಿರುತ್ತದೆ.

2020–21ರಲ್ಲಿ ಮಂಜೂರಾದ ಕೇಂದ್ರದ ಪಾಲಿನ ಬಾಕಿ ಮೊತ್ತ ರೂ.15.88 ಕೋಟಿಗಳನ್ನು 2021–22ರಲ್ಲಿ ಬಿಡುಗಡೆ ಮಾಡಲಾಗಿದೆ ಅದಕ್ಕನುಗುಣವಾಗಿ ಹೊಂದಾಣಿಕೆಯಾಗುವ ರಾಜ್ಯದ ಪಾಲು ರೂ. 6.35 ಕೋಟಿ ಕೂಡ ಬಿಡುಗಡೆ ಮಾಡಲಾಗಿದೆ.

2021–22 ರಲ್ಲಿ, ರೂ.3183.00 ಲಕ್ಷಗಳ ಬಜೆಟ್ ಹಂಚಿಕೆಯನ್ನು ಮೀಸಲಿಡಲಾಗಿದೆ. ನಂತರ ಹೆಚ್ಚುವರಿಯಾಗಿ ರೂ.949.45 ಲಕ್ಷಗಳನ್ನು ಈ ಯೋಜನೆಯಡಿ ಹಂಚಿಕೆ ಮಾಡಲಾಗಿದೆ. ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕೆ ರೂ.5925.91 ಲಕ್ಷ ಬಿಡುಗಡೆ ಮಾಡಲಾತರುತ್ತದೆ.ಇದರಲ್ಲಿ ರೂ.2172.89 ಲಕ್ಷಗಳನ್ನು ವೆಚ್ಚ ಮಾಡಲಾಗಿದ್ದು, ವಿವರಗಳು ಕೆಳಕಂಡಂತಿರುತ್ತವೆ.

| ಕ್ರ.ಸಂ | ಉಪ–ಘಟಕ ಮತ್ತು ಚಟುವಟಿಕೆಗಳು | ಭೌತಿಕ ಪ್ರಗತಿ | ಆರ್ಥಿಕ ಪ್ರಗತಿ (ರೂ.ಲಕ್ಷಗಳಲ್ಲಿ) |
|---|---|---|---|
| 1 | ಹೊಸ ಪಾಲನೆ ಕೊಳಗಳ ನಿರ್ಮಾಣ (ನರ್ಸರಿ/ಮೀನುಮರಿ ಪಾಲನಾ ಕೊಳಗಳು) | 3.1ಹೆ | 8.9 |
| 2 | ಹೊಸ ಮೀನುಕೃಷಿ ಕೊಳಗಳ ನಿರ್ಮಾಣ(ಹೆ.ಗಳಲ್ಲಿ) | 260.1 ಹೆ | 801.0 |
| 3 | ಸಮಗ್ರ ಮೀನು ಕೃಷಿ, ಸ್ಕ್ಯಾಂಪಿ, ಪಂಗೇಶಿಯಸ್, ತಿಲಾಪಿಯಾ ಸೇರಿದಂತೆ ಸಿಹಿ ನೀರಿನ ಜಲಕೃಷಿಗೆ ಹೂಡಿಕೆ ವೆಚ್ಚಗಳು | 93.3 | 169.8 |
| 4 | ಸಿಹಿನೀರಿನ ಪ್ರದೇಶಗಳಿಗೆ ಬಯೋಫ್ಲಾಕ್ ಕೊಳಗಳ ನಿರ್ಮಾಣ, (ಹೆಕ್ಟೇರಿಗೆ ರೂ.4.00ಲಕ್ಷ ಹೂಡಿಕೆ ವೆಚ್ಚ ಸೇರಿದಂತೆ) | 22.3 ಹೆ | 168.4 |
| 5 | ಜಲಾಶಯಗಳಲ್ಲಿ ಬಲಿತ ಮೀನು ಮರಿಗಳ ದಾಸ್ತಾನು @ 1000 ಬಲಿತ ಬಿತ್ತನೆ ಮರಿ/ ಹೆ (ರೂ.3.0 ಲಕ್ಷ / ಒಂದು ಲಕ್ಷ ಬಿತ್ತನೆ ಮರಿ) | 6.1 ಹೆ | 5.4 |
| 6 | ದೊಡ್ಡ ಆರ್.ಎ.ಎಸ್ ಸ್ಥಾಪನೆ (ಕನಿಷ್ಠ 90 ಮೀ 3 / ಟ್ಯಾಂಕ್ ಸಾಮರ್ಥ್ಯದ 8 ಟ್ಯಾಂಕ್‌ಗಳು 40 ಟನ್ / ಬೆಳೆ) / ಬಯೋಫ್ಲಾಕ್ (4 ಮೀ ದಿಯಾ 50 ಟ್ಯಾಂಕ್‌ಗಳು ಮತ್ತು 1.5 ಎತ್ತರದ) ಸಂಸ್ಕೃತಿ ವ್ಯವಸ್ಥೆ. | 5 | 115.0 |
| 7 | ಮಧ್ಯಮ ಆರ್.ಎ.ಎಸ್ ಸ್ಥಾಪನೆ (ಕನಿಷ್ಠ 30 ಮೀ 3 / ಟ್ಯಾಂಕ್ ಸಾಮರ್ಥ್ಯದ 10 ಟ್ಯಾಂಕ್ / ಬೆಳೆ 6 ಟ್ಯಾಂಕ್‌ನೊಂದಿಗೆ) / ಬಯೋಫ್ಲಾಕ್ ಸಂಸ್ಕೃತಿ ವ್ಯವಸ್ಥೆ (4 ಮೀ ಡಯಾ ಮತ್ತು 1. ಮೀ ಎತ್ತರದ 25 ಟ್ಯಾಂಕ್‌ಗಳು) | 16 | 265.0 |
| 8 | ಸಣ್ಣ ಆರ್.ಎ.ಎಸ್ (100 ಮೀ 3 ಸಾಮರ್ಥ್ಯದ 1 ಟ್ಯಾಂಕ್ / ಬಯೋಫ್ಲಾಕ್ (4 ಮೀ ಡಯಾ ಮತ್ತು 1.5 ಎತ್ತರದ 7 ಟ್ಯಾಂಕ್‌ಗಳು) ಪದ್ಧತಿಯ ಕೃಷಿ ವ್ಯವಸ್ಥೆಯನ್ನು ಸ್ಥಾಪಿಸುವುದು | 13 | 45.0 |
| 9 | ಬ್ಯಾಕ್ ಯಾರ್ಡ್ ಮಿನಿ ಆರ್.ಎಸ್ ಘಟಕಗಳ ಸ್ಥಾಪನೆ | 1 | 0.2 |
| 10 | ಕನಿಷ್ಠ 50 ಟನ್ ಸಂಗ್ರಹ ಸಾಮರ್ಥ್ಯದ ಸ್ಥಾವರ | 5 | 360.0 |
| 11 | ಶೈತ್ಯಾಗಾರ / ಮಂಜುಗಡ್ಡೆ ಸ್ಥಾವರಗಳ ಆಧುನೀಕರಣ | 1 | 30.0 |
| 12 | ಶೈತ್ಯೀಕರಿಸಿದ ವಾಹನಗಳು | 2 | 30.0 |
| 13 | ಶಾಖ ನಿರೋಧಕ ವಾಹನಗಳು | 8 | 76.8 |
| 14 | ಐಸ್ ಬಾಕ್ಸ್‌ನೊಂದಿಗೆ ಮೋಟಾರ್ ಸೈಕಲ್ | 21 | 6.6 |
| 15 | ಐಸ್ ಬಾಕ್ಸ್ ಗಳೊಂದಿಗೆ ಸೈಕಲ್ | 2 | 0.1 |

| | | | |
|---|---|---|---|
| 16 | ಮೀನು ಮಾರಾಟಕ್ಕಾಗಿ ಇ-ರಿಕ್ಷಾಗಳನ್ನು ಒಳಗೊಂಡಂತೆ ಐಸ್ ಬಾಕ್ಸ್ ಹೊಂದಿರುವ ತ್ರಿಚಕ್ರ | 4 | 6.6 |
| 17 | ಜೀವಂತ ಮೀನು ಮಾರಾಟ ಕೇಂದ್ರಗಳು | 2 | 24.0 |
| 18 | ಅಲಂಕಾರಿಕ ಮೀನು / ಅಕ್ವೇರಿಯಂ ಮಾರುಕಟ್ಟೆಗಳು ಸೇರಿದಂತೆ ಮೀನು ಚಿಲ್ಲರೆ ಮಾರುಕಟ್ಟೆಗಳ ನಿರ್ಮಾಣ. | 0.0 | 0.0 |
| 19 | ಅಕ್ವೇರಿಯಂ / ಅಲಂಕಾರಿಕ ಮೀನುಗಳ ಕಿಯೋಸ್ಕ್ ಸೇರಿದಂತೆ ಮೀನು ಕಿಯೋಸ್ಕ್‌ಗಳ ನಿರ್ಮಾಣ | 12 | 60.0 |
| | **ಒಟ್ಟು** | | **2172.89** |

## 6.3 ನಿರ್ದೇಶನ ಮತ್ತು ಆಡಳಿತ (2405-00-001-0-01)

ಈ ಲೆಕ್ಕ ಶೀರ್ಷಿಕೆಯಡಿ ರಾಜ್ಯ ವಲಯ ಯೋಜನೆಯಡಿ ಮಂಜೂರಾದ ಕೇಂದ್ರ ಕಛೇರಿ ಹಾಗೂ ಇತರೆ ಕಛೇರಿಗಳ ಸಿಬ್ಬಂದಿ ವೆಚ್ಚ, ಅಭಿಯಂತರರ ವೇತನ, ಗಣಕಯಂತ್ರ, ಫ್ಯಾಕ್ಸ್ ಯಂತ್ರ ಮತ್ತು ಇತರೆ ವಿದ್ಯುನ್ಮಾನ ಉಪಕರಣಗಳ ಅಳವಡಿಕೆ ಮತ್ತು ಅವುಗಳ ನಿರ್ವಹಣೆ, ವಾಹನ ಖರೀದಿ, ಇತ್ಯಾದಿ ವೆಚ್ಚವನ್ನು ಭರಿಸಲು ಅವಕಾಶ ಕಲ್ಪಿಸಲಾಗಿದೆ. ಈ ಯೋಜನೆಯಡಿ ಇಲಾಖೆಯ ಕಛೇರಿಗಳ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ, ಆಧುನೀಕರಣ ಮತ್ತು ದುರಸ್ತಿ ಕೆಲಸಗಳನ್ನು ತೆಗೆದುಕೊಳ್ಳಲು, ಮತ್ಸ್ಯಾಲಯಗಳ ಕಾಮಗಾರಿಗಳು ಮತ್ತು ನಿರ್ವಹಣೆಗೆ ಬೇಕಾಗುವ ಸಲಕರಣೆಗಳನ್ನು ಮತ್ತು ಇತರೆ ಸಾಮಗ್ರಿಗಳನ್ನು ಖರೀದಿಸಲು ಅವಕಾಶ ಕಲ್ಪಿಸಲಾಗಿದೆ. 2021-22 ನೇ ಸಾಲಿನಲ್ಲಿ ರೂ.2766.00 ಲಕ್ಷ ಅನುದಾನ ಒದಗಿಸಲಾಗಿರುತ್ತದೆ ಹಾಗೂ ರೂ.374.65 ಲಕ್ಷಗಳನ್ನು ಮೀನುಗಾರಿಕೆ ದೋಣಿಗಳಿಗೆ ಡೀಸೆಲ್-ಮಾರಾಟ ತೆರಿಗೆ ಮರುಪಾವತಿ ಯೋಜನೆಯಿಂದ ಮತ್ತು ರೂ.10.00ಲಕ್ಷಗಳನ್ನು ಒಳನಾಡು ಮೀನುಗಾರಿಕೆ ಅಭಿವೃದ್ಧಿ ಯೋಜನೆಯಿಂದ ಪುನರ್ವಿನಿಯೋಗದಿಂದ ಒದಗಿಸಲಾಗಿದ್ದು, ರೂ.3120.94ಲಕ್ಷ ವೆಚ್ಚ ಮಾಡಲಾಗಿದೆ.

## 6.4 ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ 2021-22 ನೇ ಸಾಲಿನಲ್ಲಿ ರೂ.316.85 ಲಕ್ಷ ಅನುದಾನವನ್ನು ಹಂಚಿಕೆ ಮಾಡಲಾಗಿದೆ. ಸದರಿ ಯೋಜನೆಯಡಿ ಸುಧಾರಿತ ವಂಶವಾಹಿನಿ ಮೀನುತಳಿಗಳ ಕೃಷಿಗೆ ನೆರವು ಯೋಜನೆ (ರೂ.200.00 ಲಕ್ಷ), ಆರ್.ಎ.ಎಸ್ ಘಟಕಗಳಲ್ಲಿ ವಿವಿಧ ಮೀನು ತಳಿಗಳ ಉತ್ಪಾದನಾ ಸಾಮರ್ಥ್ಯ ಮತ್ತು ಆರ್ಥಿಕತೆಯ ಮೌಲ್ಯಮಾಪನ ಯೋಜನೆ (ರೂ.116.85 ಲಕ್ಷ) ಕಾರ್ಯಕ್ರಮಗಳನ್ನು ಕೈಗೊಳ್ಳಲು ಮಂಜೂರಾತಿ ನೀಡಲಾಗಿದೆ. ಆರ್.ಎ.ಎಸ್ ಘಟಕಗಳಲ್ಲಿ ವಿವಿಧ ಮೀನು ತಳಿಗಳ ಉತ್ಪಾದನಾ ಸಾಮರ್ಥ್ಯ ಮತ್ತು ಆರ್ಥಿಕತೆಯ ಮೌಲ್ಯಮಾಪನ ಮಾಡಲು ರೂ.92.00ಲಕ್ಷಗಳ ಅನುದಾನವನ್ನು ಒಳನಾಡು ಮೀನುಗರಿಕೆ ಮತ್ತು ಮಾಹಿತಿ ಕೇಂದ್ರ (FRIC), ಹೆಬ್ಬಾಳ, ಬೆಂಗಳೂರು ರವರಿಗೆ ಬಿಡುಗಡೆ ಮಾಡಲಾಗಿದೆ.

## 7. ಜಿಲ್ಲಾ ಪಂಚಾಯತ್ ಯೋಜನೆಗಳ ವಿವರ:

### 7.1 ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ:(2405-00-101-0-27)

ಈ ಯೋಜನೆಯಡಿ ಕಛೇರಿ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ, ಮೀನು ಮರಿ ಉತ್ಪಾದನಾ ಕೇಂದ್ರಗಳ ಮತ್ತು ತಾಲ್ಲೂಕು ಮಟ್ಟದ ನರ್ಸರಿಗಳ ದುರಸ್ತಿ ಮತ್ತು ಸುಧಾರಣೆ, ಕರಾವಳಿ ಜಿಲ್ಲೆಗಳಲ್ಲಿ ಮೀನುಗಾರಿಕೆ ಜೆಟ್ಟಿಗಳ, ಇಳಿದಾಣ ಕೇಂದ್ರಗಳ, ಹರಾಜು ಪ್ರಾಂಗಣಗಳ ನಿರ್ಮಾಣ ಮತ್ತು ನಿರ್ವಹಣೆಗೆ, ಕಾರವಾರ, ಹಾಸನ, ಬೆಳಗಾವಿ, ಕಲಬುರ್ಗಿ, ದಕ್ಷಿಣ ಕನ್ನಡ, ಬೀದರ್, ಕೋಲಾರ, ಕೊಡಗು ಮತ್ತು ವಿಜಯಪುರ ಜಿಲ್ಲೆಗಳಲ್ಲಿರುವ ಮತ್ಸ್ಯಾಲಯಗಳ ನಿರ್ವಹಣೆಗೆ ಸಾಮಗ್ರಗಳ ಖರೀದಿಗೆ, 2021-22 ನೇ ಸಾಲಿನಲ್ಲಿ ರೂ.415.05 ಲಕ್ಷ ಅನುದಾನ ಒದಗಿಸಲಾಗಿದ್ದು, ಇಲಾಖೆಯ ಕಟ್ಟಡಗಳ ಮತ್ತು ಮೀನುಮರಿ ಉತ್ಪಾದನಾ/ಪಾಲನಾ ಕೇಂದ್ರಗಳ ನಿರ್ಮಾಣ ಮತ್ತು ನಿರ್ವಹಣೆಗಾಗಿ ರೂ.314.56 ಲಕ್ಷ ವೆಚ್ಚ ಮಾಡಲಾಗಿದೆ

### 7.2 ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ (2405-00-101-0-28):

ಈ ಯೋಜನೆಯಡಿ ಜೌಗು ಹಾಗೂ ಚೌಳು ಪ್ರದೇಶಗಳಲ್ಲಿ ಒಂದು ಎಕರೆ ಮೀನು ಕೃಷಿ ಕೊಳ ನಿರ್ಮಿಸಲು ಪ್ರತಿ ಎಕರೆ ಮೀನು ಕೃಷಿ ಕೊಳ ನಿರ್ಮಾಣ ಹಾಗೂ ಮೊದಲ ವರ್ಷದ ಆವರ್ತಕ ವೆಚ್ಚದ ಶೇಕಡ 25ರಷ್ಟು ಗರಿಷ್ಠ ರೂ.30,000/- ಸಹಾಯಧನ ನೀಡಲಾಗುತ್ತದೆ. ಸ್ವಂತ ಜಮೀನಿನಲ್ಲಿ ಒಂದು ಎಕರೆ ಮೀನುಕೃಷಿ ಕೊಳವನ್ನು ನಿರ್ಮಾಣ ಮಾಡಿ ಮೀನುಗಾರಿಕೆಯನ್ನು ತೆಗೆದುಕೊಳ್ಳಲು ಖಾಸಗಿ ವ್ಯಕ್ತಿಗಳಿಗೆ ರೂ.10,000.00 ಗಳ ಸಹಾಯಧನ ನೀಡಲಾಗುತ್ತದೆ. ಅಲ್ಲದೆ, ಹುಲ್ಲುಗೆಂಡೆ ಮೀನುಮರಿಗಳನ್ನು ಕೆರೆಗಳಲ್ಲಿ ಬಿತ್ತನೆ ಮಾಡಿದ ಕೃಷಿಕರಿಗೆ ಶೇ.50 ಗರಿಷ್ಠ ರೂ.5000/- ಗಳ ಸಹಾಯಧನವನ್ನು ನೀಡಲಾಗುವುದು ಹಾಗೂ ಬಾವಿ ಮತ್ತು ನೀರಾವರಿ ಹೊಂಡಗಳಲ್ಲಿ ಮೀನು ಕೃಷಿಗಾಗಿ 250 ಸಾಮಾನ್ಯ ಗೆಂಡೆ ಮರಿಗಳನ್ನು ಉಚಿತವಾಗಿ ಸರಬರಾಜು ಮಾಡಿ ಮೀನು ಕೃಷಿಯನ್ನು ಪ್ರೋತ್ಸಾಹಿಸಲಾಗುವುದು.

ಈ ಯೋಜನೆಯಡಿ ಅನುದಾನವನ್ನು ಮೀನುಮರಿಗಳ ಉತ್ಪಾದನಾ ಕೇಂದ್ರದಲ್ಲಿ ಮೀನುಮರಿಗಳ ಉತ್ಪಾದನೆಗೆ, ಮೀನುಮರಿಗಳ ಉತ್ಪಾದನಾ ಕೇಂದ್ರದಲ್ಲಿ ಮತ್ತು ತಾಲ್ಲೂಕು ಮಟ್ಟದ ನರ್ಸರಿಗಳಲ್ಲಿ ಮೀನುಮರಿಗಳ ಪಾಲನೆಗೆ, ಫಾರಂಗಳಲ್ಲಿ ಕೇಜ್ ಮತ್ತು ಪೆನ್‌ಗಳಲ್ಲಿ ಮೀನುಮರಿ ಪಾಲನೆಗೆ

ಹಾಗೂ ನಿರ್ವಹಣೆಗೆ ತಗಲುವ ವೆಚ್ಚಗಳಿಗೆ, ಮೀನುಮರಿ ಖರೀದಿ ಮತ್ತು ಸಾಗಾಣಿಕೆಗೆ, ಮೀನುಮರಿಗಳ ಸಾಗಾಟಕ್ಕಾಗಿ ವಾಹನಗಳ ಖರೀದಿ, ವಾಹನಗಳ ನಿರ್ವಹಣೆ ಮತ್ತು ಇತರ ಮೀನುಮರಿ ಉತ್ಪಾದನೆ ಮತ್ತು ಪಾಲನಾ ಕೇಂದ್ರಕ್ಕೆ ಅವಶ್ಯವಿರುವ ಸಲಕರಣೆಗಳ ಖರೀದಿ ವೆಚ್ಚಗಳಿಗೆ ಅವಕಾಶ ಕಲ್ಪಿಸಲಾಗಿದೆ.

2021-22ನೇ ಸಾಲಿನಲ್ಲಿ ಸದರಿ ಯೋಜನೆಯ ಅನುಷ್ಠಾನಕ್ಕೆ ರೂ.220.65 ಲಕ್ಷಗಳ ಅನುದಾನವನ್ನು ಒದಗಿಸಲಾಗಿದ್ದು ಈ ಮೇಲಿನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಒಟ್ಟು ರೂ.239.37 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ. ಸದರಿ ಯೋಜನೆಯಡಿ ವೆಚ್ಚ ಭರಿಸಲು ಹೆಚ್ಚುವರಿ ಅನುದಾನ ರೂ.546.92ಲಕ್ಷಗಳನ್ನು ನೀಡಲಾಗಿದ್ದು, 2791 ಫಲಾನುಭವಿಗಳಿಗೆ ಈ ಯೋಜನೆಯ ಸೌಲಭ್ಯ ನೀಡಲು ಒಟ್ಟು ರೂ.672.35 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

## 7.3 ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ (2405-00-101-0-30)

ಮೀನುಗಾರರು ಮೀನನ್ನು ತಾಜಾ ಸ್ಥಿತಿಯಲ್ಲಿ ಮಾರಾಟ ಮಾಡಲು ಅನುಕೂಲವಾಗುವಂತೆ ಶಾಖ ನಿರೋಧಕ ಪೆಟ್ಟಿಗೆ ಮತ್ತು ಸೈಕಲ್ಲುಗಳನ್ನು ಖರೀದಿಸಲು ಶೇ.50ರಷ್ಟು ಗರಿಷ್ಠ ರೂ.2000/- ಸಹಾಯಧನ, ದ್ವಿಚಕ್ರ ವಾಹನ ಮತ್ತು ಶಾಖ ನಿರೋಧಕ ಪೆಟ್ಟಿಗೆ ಖರೀದಿಸಲು ಶೇ.25ರಷ್ಟು ಗರಿಷ್ಠ ರೂ.10000/-ಗಳ ಸಹಾಯಧನವನ್ನು ನೀಡಲಾಗುವುದು.

ಇಳಿದಾಣ ಕೇಂದ್ರಗಳಿಂದ ತಾಜಾ ಮೀನನ್ನು ಆರೋಗ್ಯಕರ ರೀತಿಯಲ್ಲಿ ಮಾರಾಟ ಸ್ಥಳಗಳಿಗೆ ತ್ವರಿತ ಸಾಗಾಣಿಕೆಗಾಗಿ ಮೀನುಗಾರರಿಗೆ ವಾಹನವನ್ನು ಖರೀದಿಸಲು ಆರ್ಥಿಕ ನೆರವನ್ನು ನೀಡುವ ಉದ್ದೇಶದಿಂದ "ಮತ್ಸ್ಯವಾಹಿನಿ" ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ತ್ರಿಚಕ್ರ, ಟೆಂಪೋ ರಿಕ್ಷಾ ಖರೀದಿಸಲು ಶೇ.25ರಷ್ಟು ಗರಿಷ್ಠ ರೂ.30,000/- ಸಹಾಯಧನ ಹಾಗೂ ನಾಲ್ಕುಚಕ್ರ ವಾಹನ ಖರೀದಿಸಲು ಶೇ.25ರಷ್ಟು ಗರಿಷ್ಠ ರೂ.35,000/- ಸಹಾಯಧನವನ್ನು ಮೂರು ಅಥವಾ ನಾಲ್ಕು ಫಲಾನುಭವಿಗಳ ಒಂದು ಗುಂಪಿಗೆ ನೀಡಲಾಗುವುದು.

ಇದಲ್ಲದೆ ಸದರಿ ಯೋಜನೆಯಡಿ ಯಾಂತ್ರೀಕೃತವಲ್ಲದ (ಪಾತಿ) ದೋಣಿ ಹೊಂದಿರುವ ಮೀನುಗಾರರಿಗೆ ಮೀನುಗಾರಿಕೆ ಸಲಕರಣೆಗಳನ್ನು ಗರಿಷ್ಠ ರೂ.10000/-ಗಳ ಘಟಕ ವೆಚ್ಚದಲ್ಲಿ ಖರೀದಿಸಲು ಮತ್ತು ಶೇ.50ರಷ್ಟು ಗರಿಷ್ಠ ರೂ.5000/-ಗಳನ್ನು ಸಹಾಯಧನವಾಗಿ ನೀಡಲು ಅವಕಾಶ ಕಲ್ಪಿಸಲಾಗಿದೆ.

2021-22ನೇ ಸಾಲಿನಲ್ಲಿ ಈ ಯೋಜನೆಗಾಗಿ ರೂ.180.00 ಲಕ್ಷ ಆಯವ್ಯಯ ಒದಗಿಸಲಾಗಿದ್ದು, ರೂ.173.43 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ ಮತ್ತು 1189 ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ.

## 7.4 ಪ್ರದರ್ಶನ ಮತ್ತು ತರಬೇತಿ (2405-00-101-0-32):

ಮೀನು ಕೃಷಿಯ ಬಗ್ಗೆ ಜಾಗೃತಿ ಮೂಡಿಸುವ ಹಿತದೃಷ್ಟಿಯಿಂದ ಸಾರ್ವಜನಿಕರ ಮಾಹಿತಿಗಾಗಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ನಡೆಯುವ ವಸ್ತು ಪ್ರದರ್ಶನಗಳಲ್ಲಿ ಮೀನುಗಾರಿಕೆ ಇಲಾಖಾ ಕಾರ್ಯಕ್ರಮಗಳ ಬಗ್ಗೆ ಪ್ರದರ್ಶಿಸಲಾಗುವುದು, ಆಸಕ್ತಿ ಹೊಂದಿದ ಕೃಷಿಕರಿಗೆ ಮೀನು ಕೃಷಿಯ ಬಗ್ಗೆ ತರಬೇತಿ ನೀಡುವುದು ಹಾಗೂ ಮತ್ಸ್ಯಪಾಲನೆ ಮತ್ತು ಇಲಾಖಾ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಲಾಗುವುದು. 2021-22ನೇ ಸಾಲಿನಲ್ಲಿ ಪ್ರದರ್ಶನ ಮತ್ತು ತರಬೇತಿಗೆ ರೂ.100.00 ಲಕ್ಷ ಅನುದಾನ ಒದಗಿಸಲಾಗಿದ್ದು ರೂ.98.16 ಲಕ್ಷ ವೆಚ್ಚ ಮಾಡಲಾಗಿದೆ.

## 7.5 ಜಿಲ್ಲಾ ಮತ್ತು ಇತರೆ ಸಿಬ್ಬಂದಿ (2405-00-101-0-26) ಜಿಲ್ಲಾ ವಲಯ:

ಸದರಿ ಯೋಜನೆಯಡಿ ಜಿಲ್ಲಾ ವಲಯದ ಸಿಬ್ಬಂದಿ ವೇತನ ಮತ್ತು ಇತರೆ ವೆಚ್ಚಗಳನ್ನು ಭರಿಸಲು ಅನುದಾನ ಕಲ್ಪಿಸಲಾಗಿದೆ. 2021-22ನೇ ಸಾಲಿನಲ್ಲಿ ರೂ.2942.28ಲಕ್ಷಗಳ ಅನುದಾನ ಒದಗಿಸಲಾಗಿದ್ದು, ರೂ.2960.67 ಲಕ್ಷ ವೆಚ್ಚ ಮಾಡಲಾಗಿದೆ. ಮತ್ತು ಈ ಯೋಜನೆಯಡಿ ಹೆಚ್ಚುವರಿ ಅನುದಾನ ರೂ.18.39ಲಕ್ಷಗಳನ್ನು ನೀಡಲಾಗಿದೆ

2021-22 ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಯೋಜನೆಗಳ ಅನುಷ್ಠಾನದಲ್ಲಿ ಸಾಧಿಸಲಾದ ಆರ್ಥಿಕ ಪ್ರಗತಿಯನ್ನು ಕೆಳಗೆ ನಮೂದಿಸಲಾಗಿದೆ.

(ರೂ. ಲಕ್ಷಗಳಲ್ಲಿ)

| ಯೋಜನೆ | ನಿಗದಿಪಡಿಸಿದ ಅನುದಾನ | ಪರಿಷ್ಕೃತ ಅನುದಾನ | ವೆಚ್ಚ |
|---|---|---|---|
| 1) ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ | 415.03 | 415.03 | 314.56 |
| 2) ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ | 220.65 | 767.57 | 672.35 |
| 3)ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ | 180.00 | 180.00 | 173.43 |
| 4) ಪ್ರದರ್ಶನಗಳು ಮತ್ತು ತರಬೇತಿ | 100.00 | 100.00 | 98.16 |

| | | | |
|---|---|---|---|
| 5) ಜಿಲ್ಲಾ ಮತ್ತು ಇತರೆ ಸಿಬ್ಬಂದಿ | 2942.28 | 2960.67 | 2701.52 |
| **ಒಟ್ಟು** | **3384.00** | **4423.27** | **3960.02** |

## 8. ವೆಚ್ಚ ಮತ್ತು ಆದಾಯ:

2020–21 ಮತ್ತು 2021–22ನೇ ಸಾಲುಗಳಲ್ಲಿ ಇಲಾಖೆಯ ವಿವಿಧ ಯೋಜನೆಗಳಡಿ ಆಗಿರುವ ವೆಚ್ಚ ಮತ್ತು ಆದಾಯದ ವಿವರಗಳು ಕೆಳಕಂಡಂತಿವೆ. (ರೂ.ಲಕ್ಷಗಳಲ್ಲಿ)

| ಕ್ರ.ಸಂ. | ಯೋಜನೆಗಳು | 2020–21 | 2021–22 |
|---|---|---|---|
| 1 | ರಾಜ್ಯ ವಲಯದ ಯೋಜನೆಗಳ ವೆಚ್ಚ | 30474.49 | 16107.68 |
| 2 | ಜಿಲ್ಲಾ ಪಂಚಾಯತ್ ಯೋಜನೆಗಳ ವೆಚ್ಚ | 3581.51 | 2592.16 |
| 3 | ಆದಾಯ | 1920.82 | 2245.98 |

**ಮೀನುಗಾರಿಕೆ ನಿರ್ದೇಶಕರು.**